ಲೋಕಶಿಕ್ಷಣ ನಿರ್ದೇಶನಾಲಯ
ನವಸಾಕ್ಷರ ಪುಸ್ತಕ ಮಾಲೆ—೧೦೨

ಅಜ್ಜಿ ಕಥೆಗಳು

ಡಾ|| ಚಕ್ಕೆರೆ ಶಿವಶಂಕರ್

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ—೫೮೩ ೨೧೧

Ajji Kathegalu : By Dr. Chakkere Shivashankar. Published by The Director of Prasaranga, Kannada University, Hampi – 583 211, KARNATAKA.
First Impression 1994, Pp. ii + 26, Rs. 8.00

ಸಂಯೋಜನಾಧಿಕಾರಿ
ಡಾ|| ಎಚ್.ಎಸ್.ಶ್ರೀಮತಿ
ಪಠ್ಯಪುಸ್ತಕ ರಚನಾ ವಿಭಾಗ

ಪ್ರಕಾಶಕರು
ನಿರ್ದೇಶಕರು
ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ—೫೮೩ ೨೧೧

ಮುಖಪುಟ ವಿನ್ಯಾಸ
ಕೆ. ಮಕಾಳಿ

ಬೆಲೆ: ರೂ ೮.೦೦

ಮುದ್ರಕರು
ಅಭಿಮಾನಿ ಪ್ರಕಾಶನ
೯೬, ಡಾ.ರಾಜಕುಮಾರ್ ರಸ್ತೆ,
ರಾಜಾಜಿನಗರ,
ಬೆಂಗಳೂರು—೫೬೦ ೦೨೧, ದೂರವಾಣಿ: ೩೩೫೬೩೯೧

ಅಜ್ಜಿ ಕಥೆಗಳು

ಸ್ವರೂಪ

ಅಜ್ಜಿ ಕತೆ ಮುಗಿಸಿ ಪದ ಹೇಳುತ್ತಿದ್ದರು

ಕಥೆ ಕಥೆ ಕಾರುಂಡ
ದೀಪ್ ದೀಪ್ ನಂಜುಂಡ
ಮಡ್ಕೆ ಕುಡ್ಕೇಲಿ ಅಟ್ಕ್ಯಂಡ
ಚಿಕ್ಕೆರೆಲ್ಬಿದ್ದ ದೊಡ್ಕೆರೆಲೆದ್ದ
ಹೇಳ್ದೋರ್ಗೆ ಕೊಟ್ಟ ಕೇಳ್ದೋರ್ಗೆ ಬಿಟ್ಟ
ಎಲ್ದೋರ್ಗೆ ಹೊತ್ಕೊಂಡ್ಹೋದ

ನಾವೆಲ್ಲರೂ ಇನ್ನೂ ರಾಜಕುಮಾರನ ಕೀಲು ಕುದುರೆ ಏಳು ಸಮುದ್ರಗಳನ್ನು ದಾಟಿ ಕೀಲು ಸಮುದ್ರಕ್ಕೆ ಹೋದದ್ದು, ಒಂಟಿ ಆಲದ ಮರದ ಮೇಲಿದ್ದ ಗಿಳಿಯ ಪಂಜರವನ್ನು ರಾಜಕುಮಾರ ಎತ್ತಿಕೊಂಡು ಬಂದದ್ದು, ಗಿಳಿಯ ಕತ್ತು ಮುರಿದು ರಾಕ್ಷಸನನ್ನು ಸಾಯಿಸಿದ್ದು. ಹಾವಾಗಿ ಹರಿದು ಹೋಗಿದ್ದ ರಾಜಕುಮಾರಿಯನ್ನು ಮನುಷ್ಯಳನ್ನಾಗಿ ಮಾಡಿದ್ದು, ಇದೇ ಗುಂಗಿನಲ್ಲಿ ಇರುತ್ತಿದ್ದೆವು. ಹೀಗೆ ದಿನನಿತ್ಯ ನಮ್ಮಜ್ಜಿ ಹೇಳುತ್ತಿದ್ದ ಕಥೆಗಳು ನಮ್ಮನ್ನು ಕಾಣದ ಲೋಕಕ್ಕೆ ಕರೆದೊಯ್ದು, ಸುಖದ ಕನಸುಗಳಲ್ಲಿ ಅದ್ದಿ, ನಾವೂ ರಾಜಕುಮಾರರಾದಂತೆ, ಅನೇಕ ಸಾಹಸಗಳನ್ನು ಕೈಗೊಂಡಂತೆ, ದುಷ್ಟರನ್ನು,



ಮಕ್ಕಳಿಗೆ ಕಥೆ ಹೇಳುತ್ತಿರುವ ಅಜ್ಜಿ

ಮಾಯಾವಿಗಳನ್ನು, ರಾಕ್ಷಸರನ್ನು ಭೂತ ಬೇತಾಳಗಳನ್ನು ಶಿಕ್ಷಿಸಿ, ಒಳ್ಳೆಯವರನ್ನು ಕಾಪಾಡಿದಂತೆ ಮುಂತಾದ ಕಲ್ಪನೆಗಳಲ್ಲಿ ಮುಳುಗುವಂತೆ ಮಾಡುತ್ತಿದ್ದವು. ಇಂತಹ ಸುಖದ, ಸಾಹಸದ ಕನಸುಗಳನ್ನು ಹೆಣೆಯುವುದು, ಅಜ್ಜಿ ಹೇಳುತ್ತಿದ್ದ ಕಥೆಗಳನ್ನು ಕೇಳುತ್ತಿದ್ದುದರಿಂದ ಮಾತ್ರವೇ ಸಾಧ್ಯವಾಗಿತ್ತೇನೋ ಎಂದು ನನಗೆ ಈಗಲೂ ಅನ್ನಿಸುವುದುಂಟು.

ಜನಪದ ಸಾಹಿತ್ಯದ ಬಹು ಮುಖ್ಯ ಪ್ರಕಾರಗಳಲ್ಲಿ ಒಂದಾದ ಕಥೆ, ಕನ್ನಡದಲ್ಲಿ ಅಜ್ಜಿ ಕಥೆಗಳೆಂದೇ ಪ್ರಸಿದ್ಧಿ. ಮನೆಯಲ್ಲಿ ಮಕ್ಕಳನ್ನಾಡಿಸುವ ಕೆಲಸ ಅಜ್ಜಿಗೆ ಸೇರಿದ್ದು. ಹರೆಯದ ಹೆಂಗಸರೆಲ್ಲಾ ಹೊಲ ಮನೆಗಳಲ್ಲಿ ದುಡಿಯಲು ಹೋಗುತ್ತಿದ್ದುದರಿಂದ ಮಕ್ಕಳನ್ನು ಮನೆಯಲ್ಲೇ ಉಳಿಯುವ ಅಜ್ಜಿಯ ಸುಪರ್ದಿಗೆ ಒಪ್ಪಿಸಿ ಹೋಗುತ್ತಿದ್ದರು. ಅಳುವ ಮಕ್ಕಳನ್ನು ಸಂತಯಿಸಲು, ನಕ್ಕು ನಗಿಸಲು ಅಜ್ಜಿ ನಾನಾ ಬಗೆಯ ಕಥೆಗಳನ್ನು ಹೇಳುತ್ತಿದ್ದಳು. ಇಲ್ಲವೇ ಮಕ್ಕಳೇ ಕಥೆಗಳಿಗಾಗಿ ಅಜ್ಜಿಯನ್ನು ಪೀಡಿಸುತ್ತಿದ್ದವು. ಅಜ್ಜಿ ಕಥೆಗಳ ಹಗೇವು ಆಗಿದ್ದಳು; ತಲಕಾವೇರಿಯಾಗಿದ್ದಳು. ಒಂದರ್ಥದಲ್ಲಿ ಕಥಾ ಸಂಸ್ಕೃತಿಯ ಪ್ರಸಾರಕಿಯಾಗಿದ್ದಳು. ಕಥಾಸಂಸ್ಕೃತಿಯ ವಾರಸುದಾರರನ್ನಾಗಿ, ಉತ್ತರಾಧಿಕಾರಿಗಳನ್ನಾಗಿ ಮಕ್ಕಳನ್ನು ರೂಪಿಸುವ ಜವಾಬ್ದಾರಿಯುತ ಹೊಣೆಗಾರಿಕೆ ಅಜ್ಜಿಯದಾಗಿತ್ತು. ಇದರಿಂದಾಗಿಯೇ 'ಅಜ್ಜಿ ಇಲ್ಲದ ಮನೆ ಮನೆಯಲ್ಲ; ಮಜ್ಜಿಗೆ ಇಲ್ಲದ ಊಟ ಊಟವಲ್ಲ' ಎಂಬ ಗಾದೆ ಹುಟ್ಟಿಕೊಂಡಿದ್ದಿರಬಹುದು. ಹೀಗೆ ಅಜ್ಜಿ ಹೇಳುತ್ತಿದ್ದ ಕಥೆಗಳಾದುದರಿಂದ ಜನಪದ ಕಥೆಗಳಿಗೆ ಅಜ್ಜಿ ಕಥೆಗಳು ಎಂದೇ ಹೆಸರಾಯಿತು.

ಜನಪದ ಕಥೆಗಳು ಮೂಲತಃ ಮನುಷ್ಯನ ವೈಯಕ್ತಿಕ ಹಾಗೂ ಸಾಮಾಜಿಕ ಅವಶ್ಯಕತೆಯ ಫಲಗಳು. ಇವು ಮಾನವನ ಪುರಾತನ ಸಂಸ್ಕೃತಿ ಮತ್ತು ಸಂಪ್ರದಾಯಗಳ ಮೇಲೆ ಬೆಳಕು ಚೆಲ್ಲುತ್ತವೆ. ನಿತ್ಯದ ದುಡಿಮೆಯ ಶ್ರಮವನ್ನು ಮರೆಯುವುದಕ್ಕೆ, ಬಿಡುವಿನ ಸಮಯವನ್ನು ನಿರಾಳವಾಗಿ ಕಳೆಯುವುದಕ್ಕೆ ಬೇಸತ್ತ ಮನಸ್ಸಿಗೆ ಮುದನೀಡುವುದಕ್ಕೆ, ಮಕ್ಕಳ ತುಂಟಾಟವನ್ನು ಅಡಗಿಸುವುದಕ್ಕೆ ಹೀಗೆ ನಾನಾ ಉದ್ದೇಶಗಳ ಹಿನ್ನೆಲೆಯಲ್ಲಿ ಕಥೆಗಳು ಹುಟ್ಟಿಕೊಂಡಿರುವ ಸಾಧ್ಯತೆಗಳಿವೆ. ಕಥೆ ಹೇಳುವ ಮತ್ತು ಕೇಳುವ ಪ್ರವೃತ್ತಿ ಇಂದು ನಿನ್ನೆಯದಲ್ಲ. ಮನುಷ್ಯ ಸಮಾಜದಷ್ಟೇ ಪ್ರಾಚೀನವಾದದ್ದು. ಇತಿಹಾಸಕ್ಕಿಂತಲೂ ಮುಂಚಿನದು. ಮಾತು ಕಲಿತ ಮಾನವ ಮಾತಿನ ಮಹಿಮೆಯನ್ನು ಅರಿತ ಮೇಲೆ ಸ್ವಾಭಾವಿಕವಾಗಿಯೇ ಕಥೆ ಹೇಳುವುದನ್ನು ರೂಢಿಸಿಕೊಂಡನು. ಬೆಳದಿಂಗಳ ಬೆಳಕಿನಲ್ಲಿ, ಚಳಿಗಾಲದ ರಾತ್ರಿಗಳಲ್ಲಿ ಬೆಂಕಿ ಕಾಯಿಸುತ್ತಾ ಕಥೆ ಹೇಳುವುದು, ಕೇಳುವುದು


ವಾಡಿಕೆಯಾಯಿತು. ಹೊರಾಂಗಣ ಕೆಲಸಗಳಲ್ಲಿ ಜನಪದ ಗೀತೆ ಎಷ್ಟರಮಟ್ಟಿಗೆ ಶ್ರಮ ಪರಿಹಾರ ಸಾಧನವಾಗಿ ಬೆಳೆದು ಬಂದಿತೋ, ಹಾಗೆಯೇ ಒಳಾಂಗಣ ಕೆಲಸಗಳಲ್ಲಿ ಕಥೆ ಪ್ರಧಾನ ಪಾತ್ರ ವಹಿಸಿತು. ಅಡಿಕೆ ಸುಲಿಯುವಾಗ, ಕಡಲೆ ಕಾಯಿ ಬಿಡಿಸುವಾಗ, ಹುಣಸೆ ಹಣ್ಣು ಚಚ್ಚುವಾಗ. ಆಲೆಮನೆ ಕೆಲಸಗಳ ನಡುವೆ ಜನ ಕಥೆ ಹೇಳಲು, ಕೇಳಲು ಆರಂಭಿಸಿದರು. ಕಥೆ ಎಂದಾಕ್ಷಣ ಮಕ್ಕಳಿಂದ ಹಿಡಿದು ಮದುಕರವರೆಗೆ ಎಲ್ಲರ ಮನಸ್ಸನ್ನು ತನ್ನೆಡೆಗೆ ಸೆಳೆದುಕೊಂಡಿತು. ಅನೇಕರು ಕಥೆ ಹೇಳುವುದನ್ನೇ ವೃತ್ತಿಯನ್ನಾಗಿಸಿಕೊಂಡರು. ರಾಜನಂಥವನೂ ಸಹ ಕಥೆ ಕೇಳಲು ಕಥೆಗಾರನ್ನು ನೇಮಿಸಿಕೊಳ್ಳುತ್ತಿದ್ದನು ಎಂಬುದು ಕಥೆಯ ಜನಪ್ರಿಯತೆಗೆ ಸಾಕ್ಷಿ. ಫಲವಾಗಿ 'ಆಡು ಮುಟ್ಟದ ಸೊಪ್ಪಿಲ್ಲ; ಕಥೆ ತಲುಪದ ಜನವಿಲ್ಲ' ಎಂಬಂತಾಯಿತು.

ಕಥೆಯಷ್ಟು ಪರಿಣಾಮಕಾರಿಯಾದುದು, ಪ್ರಭಾವಶಾಲಿಯಾದುದು ಈ ಪ್ರಪಂಚದಲ್ಲಿ ಮತ್ತೊಂದಿಲ್ಲ. ಜನತೆಯ ನಾಲಿಗೆಯ ತೂಗುತೊಟ್ಟಿಲಿನ ಮೇಲೆ ನರ್ತಿಸುತ್ತಾ ಸಮುದಾಯದ ಸರ್ವತೋಮುಖ ಅಭಿವ್ಯಕ್ತಿಯಾಗಿ, ಬದುಕಿನೊಂದಿಗೆ ಅವಿನಾಭಾವ ಸಂಬಂಧವನ್ನಿರಿಸಿಕೊಂಡು ತಲೆತಲೆಮಾರುಗಳಿಂದಲೂ ವಾಚಿಕ ಪರಂಪರೆಯಲ್ಲಿ ಹರಿದು ಬಂದಿರುವ ಕಥೆ ಕ್ರಿಯಾತ್ಮಕವಾದುದು. ಜನ ಸಮುದಾಯದ ವೈಶಿಷ್ಟ್ಯಪೂರ್ಣ ಧೋರಣೆ ಹಾಗೂ ನಂಬಿಕೆಗಳ ಸಮೂಹ ಪ್ರಜ್ಞೆಯ ಫಲವಾಗಿ ಹುಟ್ಟಿದ ಕಥೆಗಳು ವ್ಯಷ್ಟೀಕೃತವಾದರೂ ಸಮಷ್ಟಿಯ ಜನಸಮುದಾಯದ ಸ್ವತ್ತು. ಅನಾಮಿಕನೊಬ್ಬ ಸೃಷ್ಟಿಸಿ ನಾಡಿನ ಮೇಲೆ ಹರಿಯಬಿಟ್ಟುದನ್ನು ಇಡೀ ಸಮುದಾಯವೇ ತನ್ನದನ್ನಾಗಿಸಿಕೊಂಡು ಸಾಮೂಹಿಕವಾಗಿ ಪುನರ್ ಸೃಷ್ಟಿಸುತ್ತಾ ಬಂದಿರುವುದರಿಂದ ಇಲ್ಲಿ ಕೇಳಿಬರುವುದು ಒಬ್ಬರ ದನಿಯಲ್ಲ; ಸಮುದಾಯದ ದನಿ.

ಅದಮ್ಯ ಜೀವನಪ್ರೀತಿಯಿಂದ ಹುಟ್ಟಿದ ಜನಪದ ಕಥೆಗಳು ಅನಕ್ಷರಸ್ಥ ಬದುಕಿನ ಅವಕಾಶವಂಚಿತರ, ಪದ ದಲಿತರ ನೋವು ನಲಿವಿನ ದಾಖಲೆ. ಈ ನೋವು ಗೋಳುಗಳ ಹಿಂದೆ ಅಡಗಿರುವ ನಗೆಯನ್ನು, ಪ್ರೀತಿಯ ಬದುಕನ್ನು ಹುಡುಕುವುದೇ ಕಥೆಗಳ ಉದ್ದೇಶ. ಇದರಲ್ಲಿ ಎಲ್ಲವೂ ಇದೆ. ಹೇರಳವಾದ ನೋವೂ ಇದೆ, ನಗೆಯೂ ಇದೆ. ಉಂಡೂಟವನ್ನು, ಕಂಡ ಕನಸನ್ನು ವೈಭವೀಕರಿಸಿ, ಉತ್ಪ್ರೇಕ್ಷಿಸಿ, ಕಲ್ಪಿಸಿ ಹೇಳುವುದೇ ಇವುಗಳ ವಿಶೇಷ ಗುಣ. ಬದುಕಿನ ಸಮಸ್ತ ಅನುಭವಗಳನ್ನು ತೋಡಿಕೊಳ್ಳುವಾಗ ವಸ್ತುವಿನ ಆಯ್ಕೆಯ ಬಗ್ಗೆಯಾಗಲಿ, ಬಳಸುವ ಭಾಷೆಯ ಬಗೆಗಾಗಲಿ, ಯಾವುದೇ ರೀತಿಯ ಮಡಿವಂತಿಕೆ, ಸಂಕೋಚಗಳನ್ನು ಇರಿಸಿಕೊಳ್ಳದೆ ಸ್ವಚ್ಛಂದವಾಗಿ ರೂಪು ತಾಳಿವೆ.

ಸಮಷ್ಟಿ ಪ್ರತಿಭೆಯ ಅಭಿವ್ಯಕ್ತಿಯಾದ ಕಥೆಯನ್ನು ಹೇಳುವುದೂ ಒಂದು ಕಲೆ. ಎಲ್ಲರಿಗೂ ಈ ಕಲೆ ಸಿದ್ಧಿಸುವುದಿಲ್ಲ. ಕಥೆ ಕೇಳುವವರು ಬಹು ಜನರಾದರೂ ಕಥೆ ಹೇಳುವವರು ಮಾತ್ರ ವಿರಳ. ಜಗತ್ತಿನ ಎಲ್ಲಾ ಜನರೂ ಕಥೆ ಕೇಳುವುದನ್ನು ಇಷ್ಟಪಡುತ್ತಾರೆ. ಯಾವ ಕಾಲದಲ್ಲೇ ಆಗಲಿ, ಯಾವ ದೇಶದಲ್ಲೇ ಆಗಲಿ ಕಥೆ ಹೇಳುವವರು ಮತ್ತು ಕೇಳುವವರು ಇದ್ದೇ ಇರುತ್ತಾರೆ. ಆದ್ದರಿಂದ ಈ ಚಟುವಟಿಕೆಯು ಯಾವುದೇ ಕಾಲಕ್ಕಾಗಲಿ, ದೇಶಕ್ಕಾಗಲಿ ಸೀಮಿತವಾಗಿರದೆ ಮನುಷ್ಯ ಇರುವ ಕಡೆಯಲ್ಲೆಲ್ಲಾ ನಿರಾತಂಕವಾಗಿ ನಡೆದುಕೊಂಡು ಬಂದಿದೆ. ಕಥೆ ಹೇಳಲು ಮತ್ತು ಕೇಳಲು ಯಾವ ನಿರ್ಬಂಧಗಳು, ವಿಧಿ ನಿಷೇಧಗಳೂ ಇಲ್ಲ. ಜಾತಿ, ಅಂತಸ್ತು, ಲಿಂಗಭೇದ ಇಲ್ಲ, ಆಳು-ಅರಸ, ಗಂಡಸು-ಹೆಂಗಸು, ಮೇಲು-ಕೀಳೆನ್ನದೆ ಎಲ್ಲರೂ ಕಥೆಗೆ ಮುಗಿಬೀಳುತ್ತಾರೆ. 'ಚಂಡಿ ಹಿಡಿಯುವ, ಕಣ್ಣಿಗೆ ನಿದ್ದೆ ಹತ್ತದಿರುವ, ದೇಹಾಲಸ್ಯದಿಂದ ನರಳುವ ಮಗುವಿಗೆ ಕಥೆ ಸಮ್ಮೋಹನಾಂಜನವಾಗುತ್ತದೆ. ಕಥಾಶ್ರವಣ ರೋಗಿಗೆ ವೈದ್ಯನಾಗುತ್ತದೆ. ದಡ್ಡನಿಗೆ ವಿದ್ಯೆಯಾಗುತ್ತದೆ. ದುಡಿಮೆಗಾರನಿಗೆ ಚೇತೋಹಾರಿಯಾಗುತ್ತದೆ. ದುಷ್ಟನಿಗೆ ಶಿವಶಕ್ತಿ ಯಾಗುತ್ತದೆ. ಸೋಮಾರಿಗೆ ಚೈತನ್ಯದಾಯಿಯಾಗುತ್ತದೆ. ರಸಿಕನಿಗೆ ರಸಾಯನವಾಗುತ್ತದೆ. ಕಥೆ ಬಾಳಿನ ಬವಣೆಯನ್ನು ಮರೆಸುತ್ತದೆ. ಮಾನಸಿಕ ಯಾತನೆಯನ್ನು ಒರೆಸುತ್ತದೆ.'

ಕಥೆಗಳು ಸರಳವೂ, ಅದ್ಭುತವೂ, ರಮ್ಯವೂ, ಪವಾಡಗಳಿಂದ ಕೂಡಿದವುಗಳೂ ಆಗಿವೆ. ರಾಜಕುಮಾರ, ರಾಜಕುಮಾರಿಯರ ಬದುಕಿನ ಸುತ್ತಲೂ ಹೆಣೆದ ಇವುಗಳಲ್ಲಿ ಧೈರ್ಯ, ಸಾಹಸ, ಮಾಟ ಮಂತ್ರಗಳಿರುತ್ತವೆ. ಕಥೆಗಳಲ್ಲಿ ಬರುವ ಪಾತ್ರಗಳು ಯಾವೊಂದು ಕಾಲ ದೇಶಗಳ ಪರಿಮಿತಿಗೆ ಸೇರಿರುವುದಿಲ್ಲ. ಜನಪದರ ಮನಸ್ಸಿಗೆ ಹತ್ತಿದ ಪ್ರತಿಯೊಂದು ವಸ್ತು, ಘಟನೆಯೂ ಇಲ್ಲಿ ಪ್ರಧಾನ ಪಾತ್ರವಹಿಸುತ್ತವೆ. ಮನುಷ್ಯರೇ ಅಲ್ಲದೆ ಅತಿ ಮಾನುಷರಾದ ದೇವತೆಗಳು, ರಾಕ್ಷಸರು, ಭೂತ ಬೇತಾಳಗಳು, ಪ್ರಾಣಿ ಪಕ್ಷಿಗಳು, ಮರ ಗಿಡಗಳೂ ಸಹ ಕಥೆಗಳಲ್ಲಿ ಪಾತ್ರವಹಿಸುತ್ತದೆ. ಸ್ವರ್ಗ, ಮರ್ತ್ಯ, ಪಾತಾಳಗಳೇ ಅಲ್ಲದೆ ಏಳು ಸಮುದ್ರದಾಚೆಗಿನ ಮಾಯಾನಗರಿಯಲ್ಲಿಯೂ ಸಹ ಕಥೆ ನಡೆಯುತ್ತದೆ. ಕಥೆಯಲ್ಲಿ ನಾಯಕ, ನಾಯಕಿ, ಖಳನಾಯಕರುಗಳಿದ್ದ ಈ ಪಾತ್ರಗಳೆಲ್ಲವೂ ಒಳ್ಳೆಯದು, ಕೆಟ್ಟದ್ದರ ಪರವಾಗಿ ಹೋರಾಟ ಮಾಡುವ ಸಾಹಸವೇ ಕಥೆಗಳ ಜೀವಾಳವಾಗಿರುತ್ತದೆ. ಕಥೆ ಕೇಳುವವರು ತದೇಕಚಿತ್ತರಾಗಿ ಬೆರಗುಗಣ್ಣುಗಳಿಂದ ಕಿವಿಯರಳಿಸಿ ಕೂತು, ಇವೆಲ್ಲವನ್ನೂ ಕೇಳುತ್ತಾರೆ. ಕಥೆಗಾರ ಹೇಳುತ್ತಿರುವುದು ನಿಜವೇ, ಸುಳ್ಳೇ ಎಂದು ಯಾರೂ ಪ್ರಶ್ನಿಸುವುದಿಲ್ಲ. ಮನುಷ್ಯ ಏಳು ಹೆಡೆ ಸರ್ಪದೊಂದಿಗೆ ಹೋರಾಟ ಮಾಡುವುದು, ರಾಜಕುಮಾರ ಕೀಲುಕುದುರೆಯ ಮೇಲೆ ಕುಳಿತು ಎಲ್ಲೆಂದರಲ್ಲಿಗೆ



ಜನಪದ ಕಥೆಗಳಲ್ಲಿ ಸುಂದರಿಯರು

ಹೋಗುವುದು, ಕಪ್ಪೆ ರಾಜಕುಮಾರಿಯಾಗುವುದು, ರಾಕ್ಷಸನ ಪ್ರಾಣ ಗಿಳಿಯಲ್ಲಿ ಇರುವುದು ಸಾಧ್ಯವೇ ಎಂದು ಯಾರೂ ಸಂಶಯಪಡುವುದಿಲ್ಲ. ಬದಲಾಗಿ ಕಥೆಗಳನ್ನು ಕೇಳಿ



ಸೂರ್ಯ, ಚಂದ್ರ, ನಕ್ಷತ್ರ-ಎಲ್ಲರೂ ಇಲ್ಲಿ ಪಾತ್ರಧಾರಿಗಳು

ಸಂತೋಷಪಡುತ್ತಾರೆ. ತತ್ಕಾಲಕ್ಕೆ ತಮ್ಮ ದುಃಖದುಮ್ಮಾನಗಳನ್ನು ಮರೆಯುತ್ತಾರೆ. ತಾವೂ ಸಹ ಕೈಲಾದ ಮಟ್ಟಿಗೆ ಸಾಹಸಗಳನ್ನು ಮೆರೆಯಲು ಮನಸ್ಸು ಮಾಡುತ್ತಾರೆ.

ಜನಪದ ಕಥೆಗಳಿಗೆ ಎರಡು ಮುಖಗಳಿವೆ. ಸಾಹಿತ್ಯಕ ಮುಖದಲ್ಲಿ, ಕಲಾತ್ಮಕತೆಯೇ ಮೂಲವಾಗಿರುವ ಮನರಂಜನೆ ಕಂಡು ಬಂದರೆ, ವೈಜ್ಞಾನಿಕ ಮುಖದಲ್ಲಿ ಸಾಮಾಜಿಕ, ಚಾರಿತ್ರಿಕ, ಧಾರ್ಮಿಕ, ಮನಶ್ಶಾಸ್ತ್ರೀಯ ಮತ್ತು ಮಾನವಶಾಸ್ತ್ರೀಯ ವಿವರಗಳುಳ್ಳ ಆದಿಮಾನವನ ವೃತ್ತಾಂತ ಗೋಚರಿಸುತ್ತದೆ. ಮನುಷ್ಯನ ಸಾಂಸ್ಕೃತಿಕ ವಿಕಾಸದ ಘಟ್ಟಗಳನ್ನು ಅಭ್ಯಾಸ ಮಾಡುವುದಕ್ಕೆ ಕಥೆಗಳು ವಿಪುಲ ಸಾಮಗ್ರಿಯನ್ನು ಒದಗಿಸುತ್ತವೆ. ಮಾನವನ ನಂಬಿಕೆಗಳು, ಆಚಾರ ವಿಚಾರಗಳು, ಸಂಪ್ರದಾಯಗಳು, ಮಾತಿನ ವೈವಿಧ್ಯಗಳು, ಅಭಿವ್ಯಕ್ತಿಯ ಸ್ವರೂಪ ಇತ್ಯಾದಿಗಳನ್ನೆಲ್ಲ ಒಳಗೊಂಡಿರುವ ಕಥೆಗಳು 'ಪ್ರಾಚೀನ ಮಾನವನ ಜ್ಞಾನ ಸಂಗ್ರಹಾಲಯವೂ ಅಹುದು; ಸಾಂಸ್ಕೃತಿಕ ಸಂಗ್ರಹಾಲಯವೂ ಹೌದು.'

ಕಥೆಗಳು ಮನುಷ್ಯನ ಪಿತ್ರಾರ್ಜಿತವಾದ ಆಸ್ತಿ. ತಲೆತಲೆಮಾರುಗಳಿಂದಲೂ ಒಬ್ಬರಿಂದ ಒಬ್ಬರು ಕೇಳುವುದರ ಮೂಲಕ, ಕೇಳಿದ್ದನ್ನು ನೆನಪಿನಲ್ಲಿ ಇರಿಸಿಕೊಂಡು ಮತ್ತೆ ಹೇಳುವುದರ ಮೂಲಕ ಕಥೆಗಳು ಹಿಂದಿನಿಂದಲೂ ಉಳಿದು ಬೆಳೆದುಕೊಂಡು ಬಂದಿವೆ. ಇತಿಹಾಸಕ್ಕಿಂತಲೂ, ಸಮಾಜಕ್ಕಿಂತಲೂ ಹಿಂದಿನದಾದ ಆದಿ ಮಾನವನ ಪುರಾವೆಗಳನ್ನು ತನ್ನಲ್ಲಿ ಉಳಿಸಿಕೊಂಡು ಬಂದಿರುವ ಕಥೆಗಳ ಹುಟ್ಟು, ಬೆಳವಣಿಗೆ ಮತ್ತು ಪ್ರಸರಣದ ಬಗೆಗೆ ವಿದ್ವಾಂಸರಲ್ಲಿ ವಾದವಿವಾದಗಳು, ಸಿದ್ಧಾಂತ ಪ್ರತಿ ಸಿದ್ಧಾಂತಗಳು ಹುಟ್ಟಿಕೊಂಡಿವೆ.

ಹಲವು ರೂಪ, ಹಲವು ಬಗೆಯ ಕಥೆಗಳು ಜಗತ್ತಿನಾದ್ಯಂತ ಹರಡಿಕೊಂಡಿವೆ. ವಸ್ತುವಿನ ದೃಷ್ಟಿಯಿಂದ, ಸ್ಥಳದಿಂದ ಸ್ಥಳಕ್ಕೆ ಬೇರೆ ಬೇರೆ ಇದ್ದರೂ ಉದ್ದೇಶ ಮತ್ತು ನಿಯಮಗಳ ದೃಷ್ಟಿಯಿಂದ ಮಾತ್ರ ಜಗತ್ತಿನ ಕಥೆಗಳೆಲ್ಲಾ ಒಂದೇ ಆಗಿ ಕಂಡು ಬರುತ್ತವೆ. ಜಗತ್ತಿನ ಕಥೆಗಳನ್ನೆಲ್ಲ ಒಂದರ ಪಕ್ಕ ಒಂದನ್ನಿರಿಸಿ ನೋಡಿದಾಗ ಅವುಗಳಲ್ಲಿ ಕಂಡು ಬರುವ ಸಮಾನಾಂಶಗಳು ನಮ್ಮೆಲ್ಲರನ್ನೂ ಚಕಿತಗೊಳಿಸುತ್ತವೆ. ಭಾರತವೇ ಕಥೆಗಳ ಮೂಲ, ತವರು ಎಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ವ್ಯಾಪಾರಿಗಳು, ಮತ ಪ್ರಚಾರಕರು, ಯಾತ್ರಿಕರು, ನಾವಿಕರು, ಪ್ರವಾಸಿಗಳು ತಾವು ಸಂಚರಿಸಿದ ಕಡೆಯಲ್ಲೆಲ್ಲಾ ಭಾರತದಿಂದ ಕೊಂಡೊಯ್ದು ಕಥೆಗಳನ್ನು ಬಿತ್ತಿ ಬೆಳೆದಿದ್ದಾರೆಂದು ವಾದವಿದೆ.

ಲಕ್ಷಣಗಳು

ತಲೆತಲಾಂತರಗಳಿಂದ ಬಾಯಿಂದ ಬಾಯಿಗೆ ಕೊಡುಗೆಯಾಗಿ ಹರಿದು ಬಂದಿರುವ ಕಥೆಗಳ ವಿಶಿಷ್ಟ ಲಕ್ಷಣ ಸಾಂಪ್ರದಾಯಿಕತೆ. ಬಲ್ಲವರಿಂದ ಕಥೆಯನ್ನು ಕೇಳಿದ ಮೇಲೆ ಅದನ್ನು ನೆನಪಿನಲ್ಲಿರಿಸಿಕೊಂಡು ಮತ್ತೆ ಹೇಳುವ ಸಂದರ್ಭ ಬಂದಾಗ ಅದನ್ನು ಹೇಗೆ ನೆನಪಿನಲ್ಲಿ ಉಳಿಸಿಕೊಳ್ಳಲಾಗಿದೆಯೊ ಹಾಗೆಯೇ ಪುನರುಚ್ಚರಿಸಲಾಗುತ್ತದೆ. ಈ ಪುನರ್ ಉಚ್ಚಾರಣೆ ಆಯಾ ಕಥೆಗಾರನ ನೆನಪಿನ ಶಕ್ತಿ, ಕಲ್ಪನಾ ಸಾಮರ್ಥ್ಯ ಅನುಭವಗಳಿಗೆ ಅನುಗುಣವಾಗಿ ಬೆಳೆಯುತ್ತಾ ಹೋಗುತ್ತದೆ. ಇಂತಹ ಸಂದರ್ಭದಲ್ಲಿ ತಾನು ಕೇಳಿದ ಮೂಲಕಥೆಯಲ್ಲಿದ್ದ ಕೆಲವು ಅಂಶಗಳು ಬಿಟ್ಟು ಹೋಗಬಹುದು ಮತ್ತೆ ಹೊಸದಾಗಿ ಕೆಲವು ಅಂಶಗಳು ಸೇರಲೂಬಹುದು. ಆದರೆ ಜಗತ್ತಿನ ಎಲ್ಲಾ ಕಥೆಗಾರರಲ್ಲೂ ಕಥೆಯನ್ನು ಹೇಳುವ ವಿಧಾನದಲ್ಲಿ ಮಾತ್ರ ಏಕರೂಪತೆ ಕಂಡು ಬರುತ್ತದೆ. ಇಂತಹ ಏಕರೂಪತೆಗೆ ಕಾರಣ ಕಥೆಗಾರರು ಕಥೆ ಹೇಳುವ-ಕಲ್ಪಿಸಿಕೊಳ್ಳುವ ಮೂಲ ಪ್ರವೃತ್ತಿ ಇರ ಬಹುದು ಇಲ್ಲವೇ ಕಥೆಗಳು ಒಂದೆಡೆಯಿಂದ ಮತ್ತೊಂದೆಡೆಗೆ ಹರಡಿರುವುದಾಗಿರಬಹುದು.

ಇಲ್ಲೇ ಮತ್ತೊಂದು ಮುಖ್ಯವಾದ ಅಂಶವನ್ನೂ ಗಮನಿಸಬೇಕಾಗಿರುತ್ತದೆ. ಕಥೆಯನ್ನು ಹೇಳುವ ಮತ್ತು ಕೇಳುವಲ್ಲಿ ಇರುವ ಏಕರೂಪತೆಯ ಜೊತೆಯಲ್ಲಿಯೇ ಅಸಾಧಾರಣವಾದ ಭಿನ್ನತೆಯೂ ಕಂಡು ಬರುತ್ತದೆಂಬುದು ಗಮನಾರ್ಹವಾದ ಸಂಗತಿಯಾಗಿದೆ. ಕಥೆಗಳು ಬಾಯಿಂದ ಬಾಯಿಗೆ ಹರಿದು ಬರುವಾಗ ತಲೆಮಾರಿನಿಂದ ತಲೆಮಾರಿಗೆ, ದೇಶದಿಂದ ದೇಶಕ್ಕೆ ಹರಿದು ಬರುವುದರಿಂದ ಅವು ನಿರಂತರವಾಗಿ ಬದಲಾವಣೆಗಳಿಗೆ ಒಳಗಾಗುತ್ತಲೇ ಇರುತ್ತವೆ. ಬೇರೆ ಬೇರೆ ಕಾಲ ದೇಶಗಳಲ್ಲಿ ಬದುಕಬೇಕಾಗಿ ಬರುವುದರಿಂದ ಭೌಗೋಳಿಕ ವ್ಯತ್ಯಾಸಗಳು ಉಂಟಾಗುತ್ತವೆ ಮತ್ತು ಕಾಲ ಕಳೆದಂತೆಲ್ಲಾ ಚಾರಿತ್ರಿಕ ವ್ಯತ್ಯಾಸಗಳಿಗೂ ಗುರಿಯಾಗುತ್ತವೆ. ಕಥೆ ಬಾಯಿಂದ ಬಾಯಿಗೆ ಹರಿದು ಬರುವಾಗ ಕಥೆಗಾರರು ಜಾಣರು, ಕಲಾವಿದರು, ಕಲ್ಪನಾ ಸಾಮರ್ಥ್ಯವನ್ನುಳ್ಳವರು ಆಗಿದ್ದಲ್ಲಿ ಕಥಾ ರಚನೆಯಲ್ಲಿನ ಬಿಗಿ, ಕಥೆಯ ಓಟದ ರೀತಿ, ಶೈಲಿಯಲ್ಲಿನ ಸೊಗಸುಗಾರಿಕೆಯನ್ನು ಮತ್ತಷ್ಟು ವಿಸ್ತರಿಸುತ್ತಾರೆ. ಇದರಿಂದಾಗಿ ಕಥೆ ಹೆಚ್ಚಿನ ಕಲೆಗಾರಿಕೆಯನ್ನು ಸಾಧಿಸಿಕೊಂಡು ಭಿನ್ನತೆಯನ್ನು ಪಡೆದುಕೊಳ್ಳುತ್ತದೆ. ರೂಪದಲ್ಲಿ ವೈವಿಧ್ಯತೆಯನ್ನು, ಮೇರೆ ಮೀರಿದ ವಿಸ್ತಾರವನ್ನು ತನ್ನದಾಗಿಸಿಕೊಳ್ಳುತ್ತದೆ. ಇಂತಹ

ಪ್ರಮುಖ ಲಕ್ಷಣಗಳ ಜೊತೆಗೆ ಜಗತ್ತಿನ ಎಲ್ಲಾ ಜನಪದ ಕಥೆಗಳಿಗೂ ಸಾರ್ವತ್ರಿಕವಾಗಿ ಅನ್ವಯವಾಗುವಂತೆ ಇನ್ನೂ ಕೆಲವು ಲಕ್ಷಣಗಳನ್ನು ಜಾನಪದ ವಿದ್ವಾಂಸರು ಪಟ್ಟಿ ಮಾಡಿರುತ್ತಾರೆ.

೧. ಯಾವುದೇ ಜನಪದ ಕಥೆಯು ಇದ್ದಕ್ಕಿದ್ದಂತೆ ಆರಂಭವಾಗುವುದಿಲ್ಲ ಮತ್ತು ದಿಢೀರನೆ ಮುಕ್ತಾಯಗೊಳ್ಳುವುದಿಲ್ಲ. ನಿಧಾನವಾಗಿ ಪ್ರಾರಂಭ ವಾಗಿ ಕೇಳುಗರ ಉತ್ಸಾಹವನ್ನು ಕ್ರಮೇಣ ಕೆರಳಿಸಿಕೊಂಡು ಹೋಗಿ, ಭಾವತೀವ್ರತೆಗೆ ಕೊಂಡೊಯ್ದು, ಅಷ್ಟೇ ಸಾವಧಾನವಾಗಿ ಕೆಳಗಿಳಿದು ಬಂದು ಮುಕ್ತಾಯ ಹೊಂದುತ್ತದೆ.

೨. ಎಲ್ಲಾ ಕಥೆಗಳಲ್ಲಿಯೂ ಪುನರಾವರ್ತನೆ ಸಾಮಾನ್ಯವಾಗಿ ಕಂಡು ಬರುವ ಲಕ್ಷಣವಾಗಿದೆ. ಇದು ಕಥೆಯ ಶರೀರವನ್ನು ದಷ್ಟಪುಷ್ಟಗೊಳಿಸುವುದಲ್ಲದೆ ಕೇಳುವವರಲ್ಲಿ ಕುತೂಹಲವನ್ನು ಹೆಚ್ಚಿಸುತ್ತಾ ಹೋಗುತ್ತದೆ.

೩. ನಾಯಕ-ಪ್ರತಿನಾಯಕ, ಶಿಷ್ಟ-ದುಷ್ಟ ಹೀಗೆ ಪರಸ್ಪರ ವಿರುದ್ಧ ಸ್ವಭಾವಗಳನ್ನುಳ್ಳ ಪಾತ್ರಗಳ ನಡುವೆ ಸದಾ ಹೋರಾಟ ಇರುತ್ತದೆ. ಅಂತ್ಯದಲ್ಲಿ ನಾಯಕನಿಗೆ, ಶಿಷ್ಟಶಕ್ತಿಗೇ ಜಯ. ಕಥಾ ನಾಯಕ ಒಳ್ಳೆಯವನು, ಪ್ರತಿನಾಯಕ ದುಷ್ಟನೂ ಆಗಿರುತ್ತಾರೆ. ಕಥೆಯ ಆರಂಭದಲ್ಲಿ ದುಷ್ಟರಾಗಿದ್ದವರು ಕೊನೆಗೆ ಒಳ್ಳೆಯವರಾಗಿ ಪರಿಣಮಿಸ ಬಹುದು. ಬಹುತೇಕ ಕಥೆಗಳಲ್ಲಿ 'ಮಲತಾಯಿ' ಪ್ರತಿನಾಯಕಿಯಾಗಿ, ದುಷ್ಟಳಾಗಿ ಕಂಡು ಬರುತ್ತಾಳೆ.

೪. ಸಾಮಾನ್ಯವಾಗಿ ಒಂದು ದೃಶ್ಯದಲ್ಲಿ ಇಬ್ಬರು ಮಾತ್ರವೇ ಕಾಣಿಸಿಕೊಳ್ಳುತ್ತಾರೆ. ಇನ್ನೂ ಹೆಚ್ಚಿನ ಪಾತ್ರಗಳು ಕಂಡು ಬಂದರೂ ಏಕಕಾಲದಲ್ಲಿ ಇಬ್ಬರು ಮಾತ್ರ ಕ್ರಿಯಾಶೀಲರಾಗಿರುತ್ತಾರೆ.

೫. ಒಂದು ವೇಳೆ ಒಂದೇ ಪಾತ್ರದಲ್ಲಿ ಇಬ್ಬರು ಕಾಣಿಸಿಕೊಂಡ ಪಕ್ಷದಲ್ಲಿ ಅವರು ದುರ್ಬಲರೂ. ಅಸಹಾಯಕರೂ ಆಗಿರುತ್ತಾರೆ. ಸಾಮಾನ್ಯವಾಗಿ ಅವಳಿ ಜವಳಿಗಳಾಗಿರುತ್ತಾರೆ. ಬಲವಂತರಾದಾಗ ವೈರಿಗಳಾಗಿ ಪರಿಣಮಿಸು ವುದುಂಟು.

೬. ಅತ್ಯಂತ ದುರ್ಬಲರು, ಅನಾದರಣೆಗೆ ಒಳಗಾದವರು, ತಂದೆ ತಾಯಿಗಳಿಂದ, ಸಮಾಜದಿಂದ ನಿರ್ಲಕ್ಷ್ಯಕ್ಕೆ, ತಿರಸ್ಕಾರಕ್ಕೆ ಗುರಿಯಾದವರು ನಾಯಕರಾಗಿರುತ್ತಾರೆ. ಸಾಮಾನ್ಯವಾಗಿ ಇವರು ಕಿರಿಯ ಸೋದರ ಇಲ್ಲವೆ ಸೋದರಿಯರಾಗಿರುತ್ತಾರೆ. ಅಂತ್ಯದಲ್ಲಿ ಇವರಿಗೇ ಜಯ.


೭. ಪಾತ್ರರಚನೆ ಸರಳವಾಗಿದ್ದು, ವರ್ಣನೆಗಳು ಸಂಕ್ಷಿಪ್ತವಾಗಿರುತ್ತವೆ. ಕಥೆಗೆ ನೇರವಾಗಿ ಸಂಬಂಧಿಸಿದ ವಿಷಯಗಳು ಮಾತ್ರ ನಿರೂಪಿಸಲ್ಪಡುತ್ತವೆ. ಕಥೆಗೆ ಹೊರತಾದ ಯಾವುದೇ ಪಾತ್ರದ ಬದುಕಿನ ಚಿತ್ರಣ ಕಂಡು ಬಂದಿರುವುದಿಲ್ಲ.

೮. ಕಥಾವಸ್ತು ಸರಳವಾಗಿದ್ದು ಒಂದು ಕಥೆಯನ್ನು ಮಾತ್ರ ಒಳಗೊಂಡಿ ರುತ್ತದೆ. ಉಪಕಥೆಗಳಿರುವುದಿಲ್ಲ. ಉಪಕಥೆಗಳು ಜನಪದಕಥೆಯ ಜಾಯಮಾನವಲ್ಲ.

೯. ಪ್ರತಿಯೊಂದು ಘಟನೆಯೂ ಸರಳವಾಗಿಯೇ ನಿರೂಪಿತವಾಗುತ್ತದೆ. ಸಮಾನ ವಿಷಯಗಳೆಲ್ಲವೂ ಪರಸ್ಪರ ಪೂರಕವಾಗಿರುತ್ತವೆ.

ಕಥೆಗಳಲ್ಲಿ ಮನುಷ್ಯರಷ್ಟೇ ಅಲ್ಲದೆ ದೇವತೆಗಳು, ರಾಕ್ಷಸರು, ಭೂತ ಬೇತಾಳಗಳು, ಕ್ರೂರಜಂತುಗಳು. ಪ್ರಾಣಿಪಕ್ಷಿಗಳು, ಮರಗಿಡಗಳೂ ಸಹ ಪಾತ್ರವಹಿಸುತ್ತವೆ ಎಂದು ಹಿಂದೆಯೇ ಹೇಳಲಾಗಿದೆ. ಕಥೆಯು ಸ್ವರ್ಗ, ಮರ್ತ್ಯ, ನರಕ, ಏಳು ಸಮುದ್ರಗಳಿಂದಾಚೆ ಇರುವ ಮಾಯಾನಗರಿಯಲ್ಲಿಯೂ ನಡೆಯುತ್ತದೆ. ಕಥಾ ನಾಯಕ ದುರ್ಬಲನು, ತಿರಸ್ಕಾರಕ್ಕೆ ಒಳಗಾದವನು, ಕಿರಿಯವನು. ಆದರೆ ಸಾಹಸಿಯು, ಧೈರ್ಯಶಾಲಿಯು ಆಗಿರುತ್ತಾನೆ. ಇವನಿಗೆ ಅತಿಮಾನುಷ ವ್ಯಕ್ತಿಗಳು ಇಲ್ಲವೆ ಪ್ರಾಣಿಗಳು ವಿರೋಧಿಗಳಾಗಿ ಅಥವಾ ಸಹಾಯಕರಾಗಿ ಇರುತ್ತಾರೆ. ಕಥಾನಾಯಕನ ಹುಟ್ಟು ಸಾಮಾನ್ಯವಾಗಿ ಸಂಭವಿಸುತ್ತದೆ. ಕೆಲವೊಮ್ಮೆ ದೇವರ ಕೃಪೆಯಿಂದ ಅಸಾಮಾನ್ಯವಾಗಿಯೂ ಇರಬಹುದು. ಉದಾ: 'ಯಾಬಲಿ ರಾಜಕುಮಾರ'ನ ಕಥೆಯಲ್ಲಿ ನಾಯಕ ಯಾಬಲಿಯು ಚಿಪ್ಪಿನಿಂದ ಹೊರಬರುತ್ತಾನೆ. ಕಪ್ಪೆಚಿಪ್ಪಿನಿಂದಲೂ ರಾಜಕುಮಾರ ಹೊರಬರುವುದುಂಟು.

ನಾಯಕ ಹಲವಾರು ತೊಂದರೆಗಳಿಗೆ ಒಳಗಾಗಿ, ಅತಿಮಾನುಷ ವಿರೋಧಿಗಳು ರಾಕ್ಷಸ, ದೆವ್ವ, ಕ್ರೂರಪ್ರಾಣಿ, ಮಾಟಗಾತಿ ಮುಂತಾದ ರೂಪದಲ್ಲಿರುತ್ತಾರೆ. ಉದಾ:



ದೇವ ದಾನವರ ಮಧ್ಯೆ ಯುದ್ಧ-ಜನಪದ ಕಥೆಗಳಲ್ಲಿ ಈ ದೃಶ್ಯ ಸಾಮಾನ್ಯ

'ಧೀರ ಕುಮಾರನ ಕಥೆ'ಯಲ್ಲಿ ಬೇಟೆಗೆ ಹೋದ ರಾಜನನ್ನು ಸುಂದರಿಯ ವೇಷದಲ್ಲಿದ್ದ ರಾಕ್ಷಸಿ ಮದುವೆಯಾಗುತ್ತಾಳೆ. ಅರಮನೆಗೆ ಬಂದ ಮೇಲೆ ರಾತ್ರಿ ವೇಳೆ ಯಾರಿಗೂ ಗೊತ್ತಾಗದಂತೆ ಅಲ್ಲಿದ್ದ ದನ, ಕುದುರೆ, ಆನೆಗಳನ್ನು ತಿಂದು ಅವುಗಳ ಮೂಳೆ ರಕ್ತ ಮಾಂಸಗಳನ್ನು ಸವತಿಯರ ಹಾಸಿಗೆಗಳ ಬಳಿ ಚೆಲ್ಲಿ ಅವರ ಮೇಲೆ ಆರೋಪ ಬರುವಂತೆ ಮಾಡಿ, ರಾಜನಿಂದ ಅವರ ಕಣ್ಣುಗಳನ್ನು ಕೀಳಿಸಿ ಕಾಡಿಗೆ ಅಟ್ಟುವಂತೆ ಮಾಡುತ್ತಾಳೆ. ರಾಜನ ಏಳು ಮಂದಿ ಪತ್ನಿಯರೂ ತಾವು ಹೆತ್ತ ಮಕ್ಕಳನ್ನು ಕೊಂದು ತಿನ್ನುತ್ತಾರೆ. ಕೊನೆಯವಳು ಮಾತ್ರ ತನ್ನ ಮಗುವನ್ನು ಜೋಪಾನವಾಗಿರಿಸಿಕೊಳ್ಳುತ್ತಾಳೆ. ಆ ಮಗು ದೊಡ್ಡವನಾದ ಮೇಲೆ ಸುಂದರಿ ರೂಪದ ರಾಕ್ಷಸಿ ಇದ್ದ ಪಟ್ಟಣಕ್ಕೆ ಹೋಗುತ್ತಾನೆ. ಅಲ್ಲಿ ರಾಕ್ಷಸಿ ಒಡ್ಡಿದ ಕಠಿಣ ಪರೀಕ್ಷೆಗಳನ್ನೆಲ್ಲ ಗೆಲ್ಲುತ್ತಾನೆ. ಅವಳು ಆತನನ್ನು ಕೊಲ್ಲಬೇಕೆಂದು ಬರೆದಿದ್ದ ಪತ್ರವನ್ನು ತನ್ನ ಬಂಧುಗಳಿಗೆ ಕಳುಹಿಸಿಕೊಡುತ್ತಾಳೆ.

ಆದರೆ ರಾಜಕುಮಾರನ ಸಹಾಯಕರು ಆ ಪತ್ರವನ್ನು ತಿದ್ದಿದುದರಿಂದ ಅವನಿಗೆ ರಾಕ್ಷಸಿಯ ಬಂಧುಗಳಿಂದ ಭವ್ಯ ಸ್ವಾಗತ ದೊರೆಯುತ್ತದೆ. ಅಲ್ಲಿಂದ ತನ್ನ ತಾಯಂದಿರ ಕಣ್ಣುಗಳನ್ನು, ರಾಕ್ಷಸಿಯ ಜೀವವಿರುವ ಗಿಳಿಯನ್ನು ತೆಗೆದುಕೊಂಡು ಬರುತ್ತಾನೆ. ಗಿಳಿಯ ಕತ್ತು ಮುರಿದಾಗ ರಾಕ್ಷಸಿ ಸತ್ತು ಬೀಳುತ್ತಾಳೆ. ಹುಡುಗನ ತಂದೆಗೆ ನಿಜವಾದ ಸಂಗತಿ ತಿಳಿದು ಕಾಡಿಗೆ ಅಟ್ಟಿದ್ದ ತನ್ನ ರಾಣಿಯರನ್ನೆಲ್ಲ ಮತ್ತೆ ಅರಮನೆಗೆ ಕರೆಯಿಸಿಕೊಳ್ಳುತ್ತಾನೆ. ಹೀಗೆ ಕಥಾನಾಯಕನು ರಾಕ್ಷಸರು, ಮಾಟಗಾರರು, ಭೂತಬೇತಾಳಗಳು, ಕ್ರೂರ ಜಂತುಗಳನ್ನು ಎದುರಿಸಿ ಹೋರಾಟ ಮಾಡಿ ಜಯಗಳಿಸುವುದನ್ನು ಬಹುತೇಕ ಕಥೆಗಳಲ್ಲಿ ಕಾಣಬಹುದು.

ಅತಿಮಾನುಷ ವಿರೋಧಿಗಳಿರುವಂತೆ, ಅತಿಮಾನುಷ ಸಹಾಯಕರೂ ಇರುತ್ತಾರೆ. ಇವರು ಕುಳ್ಳರು, ಕಿನ್ನರರು, ಮಾಟಗಾತಿ ಮುದುಕಿಯರು, ಪ್ರಾಣಿಗಳು, ಭೂತ ಬೇತಾಳಗಳು, ಜಂತುಗಳಾಗಿರಬಹುದು. ಸಾಧು ಸನ್ಯಾಸಿಗಳಾಗಿರಬಹುದು. ನಾಯಕನ ಸಾಹಸ ಕಾರ್ಯಗಳಲ್ಲಿ, ಹೋರಾಟಗಳಲ್ಲಿ ನೆರವಿಗೆ ಬರುವ ಈ ಸಹಾಯಕರು ಕಥೆಯಲ್ಲಿ ನಾಯಕ, ನಾಯಕಿಯರಷ್ಟೇ ಪ್ರಧಾನ ಪಾತ್ರವಹಿಸುತ್ತಾರೆ. ಒಂದು ರಾತ್ರಿಯಲ್ಲಿ ಏಳು ಖಂಡುಗ ರಾಗಿ ಬೀಸಬೇಕು ಎಂದು ನಾಯಕಿಗೆ ವಿಧಿಸಿದಾಗ ಯಾವುದೋ ಭೂತ ನೆರವಿಗೆ ಬರುತ್ತದೆ. ಎಳ್ಳು-ಸಾಸಿವೆ ಬೆರೆಸಿರುವುದನ್ನು ಬೇರೆ ಬೇರೆ ಮಾಡಬೇಕು ಎಂದಾಗ ಅಸಂಖ್ಯಾತ ಇರುವೆಗಳು ಸಹಾಯ ಮಾಡುತ್ತವೆ. ಅಗಾಧ ರಾಶಿಯ ಅನ್ನ ತಿನ್ನುವುದು,

ಜಗತ್ತಿನ ಕೊನೆಯಲ್ಲಿರುವ ನೀರನ್ನು ಹೋಗಿ ತರುವುದು, ಅತಿಯಾದ ಶಾಖವನ್ನ ಇಲ್ಲವೆ ಅತಿಯಾದ ಶೀತವನ್ನು ಸಹಿಸುವುದು, ವಿರೋಧಿ ಸೈನ್ಯವನ್ನು ಸೋಲಿಸುವುದು, ರಾಜಕುಮಾರಿಯ ಸೆರೆ ಬಿಡಿಸುವುದು ಹೀಗೆ ಹತ್ತು ಹಲವು ಕೆಲಸಗಳನ್ನು ಈ ಸಹಾಯಕರು ಕೈಗೊಳ್ಳುತ್ತಾರೆ. ಇವರು ಕಾಯಾವಾಚಾಮನಸಾ ತಮ್ಮ ಶಕ್ತಿಯನ್ನು ನಾಯಕ, ನಾಯಕಿಗೆ ಮುಡಿಪಾಗಿಟ್ಟಿರುತ್ತಾರೆ.

ಅತಿಮಾನುಷ ಸಹಾಯಕರಾಗಿ ಪ್ರಾಣಿಗಳ ಪಾತ್ರವಂತೂ ಅತ್ಯಂತ ಪ್ರಮುಖವಾದದ್ದಾಗಿದೆ. ಇರುವೆಯಿಂದ ಹಿಡಿದು ಹುಲಿಯವರೆಗೂ ಯಾವ ಪ್ರಾಣಿ ಬೇಕಾದರೂ ನಾಯಕ, ನಾಯಕಿಗೆ ನೆರವು ನೀಡುತ್ತವೆ. ಉದಾಹರಣೆಗೆ 'ದೊಡ್ಡಬಳ್ಳಿ ಚಿಕ್ಕ ಬಳ್ಳಿ' ಎಂಬ ಕಥೆಯಲ್ಲಿ ಮೈದುನನನ್ನು ಮೋಹಿಸಿ ನಿರಾಶಳಾದ ಅತ್ತಿಗೆ ಆತನ ಮೇಲೆ ಸುಳ್ಳು ಅಪವಾದ ಹೊರಿಸಿ ಗಂಡನಿಂದ ಆತನ ಕೊಲೆ ಮಾಡಿಸುತ್ತಾಳೆ. ಮೈದುನನು ಪ್ರೀತಿಯಿಂದ ಸಾಕಿದ ಹಸುಗಳು ಅವನ ಹೆಣವನ್ನು ಕಾಯುತ್ತವೆ. ಒಂದು ಹಸು, ಒಡ್ಡಿದ ಪರೀಕ್ಷೆಯಲ್ಲಿ ಏಳು ಸಮುದ್ರದ ನೀರು ಕುಡಿದು, ಅದರ ಉಪ್ಪು ತಿಂದು ಯಶಸ್ವಿಯಾಗಿ ನಾಯಕನ ಜೀವವನ್ನು ಯಮನಿಂದ ವಾಪಸ್ ಪಡೆದು ಅವನನ್ನು ಬದುಕಿಸುತ್ತದೆ. ಈ ಕಥೆಯಲ್ಲಿ ಹಸು ನಾಯಕನ ಅತಿಮಾನುಷ ಸಹಾಯಕನಾಗಿ ಕಂಗೊಳಿಸುತ್ತದೆ.

ಅತಿಮಾನುಷ ವಿರೋಧಿಗಳು, ಸಹಾಯಕರು ಇರುವಂತೆಯೇ ನಾಯಕನ ಒಳ್ಳೆಯ ಹಾಗೂ ಕೆಟ್ಟ ಬಂಧುಗಳ ಪಾತ್ರಗಳೂ ಸಹ ಕಥೆಗಳಲ್ಲಿ ಕಂಡು ಬರುತ್ತವೆ. ಇವರು ನಾಯಕ ನಾಯಕಿಗೆ ತೀರಾ ಹತ್ತಿರದವರೇ ಆಗಿರುತ್ತಾರೆ. ಹೆತ್ತ ತಾಯಿಯೆ ಮಗನ ವಿರುದ್ಧ ಕೆಟ್ಟವಳಾಗಬಹುದು. ಅಣ್ಣನಿಗೆ ತಂಗಿಯೇ ಮುಳುವಾಗಬಹುದು. ಗಂಡನಿಗೆ ಹೆಂಡತಿಯೇ ಹಗೆಯಾಗಬಹುದು.

ಯಾವುದೋ ಕಾರಣಕ್ಕಾಗಿ ಕಷ್ಟದಲ್ಲಿ ಸಿಕ್ಕಿಕೊಂಡಿದ್ದ ರಾಜಕುಮಾರಿಯನ್ನು ಬಿಡಿಸಿ ನಾಯಕ ಮದುವೆಯಾಗುತ್ತಾನೆ.

ಆದರೆ ಅನಂತರ ಅವಳು ಬೇರೊಬ್ಬನ ಸಂಗದಲ್ಲಿ ಬಿದ್ದು, ತನ್ನ ಮಿಂಡನೊಡಗೂಡಿ ಗಂಡನನ್ನು ಕೊಲ್ಲಲು ಹವಣಿಸುತ್ತಾಳೆ. ಗಂಡನ ಮಾಂತ್ರಿಕ ವಸ್ತುಗಳನ್ನು ಅಪಹರಿಸುತ್ತಾಳೆ. ಆದರೆ ನಾಯಕ ಸೇವಕನ ಮಗಳ ಸಹಾಯದಿಂದ ಮಾಂತ್ರಿಕ ಸಾಧನಗಳನ್ನು ಮತ್ತೆ ಗಳಿಸಿ ಮಡದಿಯನ್ನು ಅವಳ ಮಿಂಡನನ್ನುಕೊಂದು

ಸೇಡು ತೀರಿಸಿಕೊಳ್ಳುತ್ತಾನೆ. ಕೊನೆಗೆ ಸಹಾಯ ಮಾಡಿದ ತನ್ನ ಸೇವಕನ ಮಗಳನ್ನೇ ಮದುವೆಯಾಗುತ್ತಾನೆ. ಹೀಗೆ ಕೆಟ್ಟ ಬಂಧುಗಳು ನಾಯಕ ಇಲ್ಲವೆ ನಾಯಕಿಗೆ ಕೊಡಬಾರದ ಕೋಟಲೆಗಳನ್ನು ಕೊಟ್ಟು ಅವರನ್ನು ನಾನಾ ವಿಧದಲ್ಲಿ ಹಿಂಸೆಗೆ ಗುರಿಪಡಿಸುತ್ತಾರೆ. ಉದಾಹರಣೆಗೆ 'ಕಟುಕ ಅಣ್ಣಯ್ಯ' ಎಂಬ ಕಥೆಯಲ್ಲಿ ಅತ್ತಿಗೆ ನಾದಿನಿಯ ಮೇಲೆ ಇಲ್ಲಸಲ್ಲದ ಆರೋಪ ಹೊರಿಸಿ ಆಕೆಯ ತಲೆ ಕಡಿಯಲು ತನ್ನ ಗಂಡನನ್ನು ಪ್ರಚೋದಿಸುತ್ತಾಳೆ. ಹೆಂಡತಿ ಹೇಳಿದ ಚಾಡಿ ಮಾತು ಕೇಳಿದ ಗಂಡ ತನ್ನ ತಂಗಿಯನ್ನು ಆಕೆಯ ಗಂಡನ ಮನೆಗೆ ಕರೆದುಕೊಂಡು ಹೋಗುವ ದಾರಿಯಲ್ಲಿ ತಲೆ ಕತ್ತರಿಸಿ ಕೆರೆಗೆ ಚೆಲ್ಲುತ್ತಾನೆ. ಅದು ತಾವರೆ ಹೂವಾಗಿ ದಾರಿಯಲ್ಲಿ ಹೋಗುವವರಿಗೆಲ್ಲಾ ತನ್ನ ದುರಂತದ ಕಥೆ ಹೇಳುತ್ತಿರುತ್ತದೆ. ಕೊನೆಗೊಂದು ದಿನ ಆಕೆಯ ಗಂಡ ಆ ದಾರಿಯಲ್ಲಿ ಬಂದು ಆ ಹೂವನ್ನು ಕಿತ್ತು ಪೂಜಿಸಿದಾಗ ತಾವರೆ ಹೂವು ಮತ್ತೆ ಮೊದಲಿನಂತೆ ಹೆಣ್ಣಾಗುತ್ತದೆ. ದುಷ್ಟ ಅಣ್ಣನಿಗೆ ಶಿಕ್ಷೆಯಾಗುತ್ತದೆ. ಕೆಟ್ಟ ಬಂಧುಗಳ ಪಾತ್ರದಲ್ಲಿ ಮಲತಾಯಿ, ಮಲಮಕ್ಕಳದೇ ಮೇಲುಗೈ.

ಜನಪದ ಕಥೆಗಳಲ್ಲಿ ಕಂಡು ಬರುವ ಮತ್ತೊಂದು ವಿಶೇಷ ಲಕ್ಷಣವೆಂದರೆ ಮಾಟದ ವಸ್ತುಗಳು, ಮಂತ್ರದ ದಂಡ, ಚಾಪೆ, ಟೋಪಿ, ಪಾದರಕ್ಷೆ, ಉಂಗುರ, ಬೂದಿ, ಕಪ್ಪು, ಭೂತಕನ್ನಡಿ, ಗೋಳಾಕಾರದ ಗಾಜಿನ ಬುರುಡೆ, ಅದ್ಭುತ ದೀಪ, ಕತ್ತಿ, ಹದ್ದಿನಗರಿ ಇತ್ಯಾದಿ. ಇಂತಹ ಮಾಂತ್ರಿಕ ಸಾಧನಗಳನ್ನು ಗಳಿಸಿಕೊಳ್ಳಲು ನಾಯಕ ಅಸಾಧಾರಣವಾದ ಸಾಹಸಗಳನ್ನು ಪ್ರದರ್ಶಿಸುತ್ತಾನೆ. ಕೈವಶವಾದ ಮೇಲೆ ಇವುಗಳ ಸಹಾಯದಿಂದ ತನ್ನ ಸಾಹಸಗಳಲ್ಲಿ, ಹೋರಾಟಗಳಲ್ಲಿ ಗೆಲುವನ್ನು ಸಂಪಾದಿಸುತ್ತಾನೆ. ಮಾಟದ ವಸ್ತುಗಳು ನಾಯಕನ ಇಷ್ಟಾರ್ಥವನ್ನು ನೆರವೇರಿಸುತ್ತವೆ. ನಾಯಕನು ಅಪಾಯಕ್ಕೆ ಸಿಲುಕಿದಾಗ ಅವನನ್ನು ರಕ್ಷಿಸುತ್ತವೆ. ಮಂತ್ರ ದಂಡ ಬೇಕಾದವರನ್ನು ಬೇಕಾದ ರೂಪಕ್ಕೆ ಪರಿವರ್ತಿಸುತ್ತದೆ. ಮಾಯದ ಚಾಪೆ, ಪಾದರಕ್ಷೆಗಳು ನಾಯಕನನ್ನು ಎಲ್ಲಿಂದ ಎಲ್ಲಿಗೆ ಬೇಕಾದರೂ ಕೊಂಡೊಯ್ಯಬಲ್ಲವು. ಮಾಯದ ದೊಣ್ಣೆ ದುಷ್ಟರನ್ನು ಬಡಿದು ಸರಿದಾರಿಗೆ ತರಬಲ್ಲದು.

ನಾಯಕನು ಸಂದರ್ಭಗಳಿಗನುಸಾರವಾಗಿ ಮಾಟದ ವಸ್ತುಗಳನ್ನು ಬಳಸಿಕೊಳ್ಳುತ್ತಾನೆ. ಬೆನ್ನಟ್ಟಿ ಬರುವ ವಿರೋಧಿಗೆ ಕೆಲವು ಮಾಂತ್ರಿಕ ವಸ್ತುಗಳನ್ನು ಎಸೆದು ಅಡ್ಡಿ ಉಂಟು ಮಾಡುತ್ತಾನೆ. ಒಂದು ಕಲ್ಲನ್ನು ಎಸೆದು ಬೆಟ್ಟವಾಗುವಂತೆ ಮಾಡಬಹುದು. ಒಂದು ಹರಳನ್ನು ಎಸೆದು ದಟ್ಟವಾದ ಕಾಡು ಬೆಳೆಯುವಂತೆ



ಮಾಯಾ ಮಂತ್ರ-ಜನಪದ ಕಥೆಗಳಲ್ಲಿ ಇರಲೇ ಬೇಕು

ಮಾಡಬಹುದು ಅಥವಾ ಒಂದು ಇದ್ದಿಲು ಚೂರು ಎಸೆದು ಬೆಂಕಿ ಎಬ್ಬಿಸಬಹುದು. ಹೀಗೆ ನಿರ್ಜೀವ ವಸ್ತುಗಳೇ ಅಲ್ಲದೆ ಕರಡಿ, ಹುಲಿ, ಕುದುರೆ, ಕತ್ತೆ, ಕೋಳಿ, ನಾಯಿ ಮುಂತಾದ ಸಜೀವ ಪ್ರಾಣಿಗಳೂ ಸಹ ಮಾಟದ ವಸ್ತುಗಳಾಗಿ ಕಾರ್ಯ ನಿರ್ವಹಿಸುತ್ತವೆ. ಮಾಯದದೊಣ್ಣೆ ಮಾಟದವಸ್ತುವಾಗಿ ಬಳಕೆಯಾಗಬಲ್ಲುದೆಂಬುದಕ್ಕೆ ಉದಾಹರಣೆಯಾಗಿ 'ಇಕ್ಕಿಕ್ಕು ದೊಣ್ಣೆ' ಎನ್ನುವ ಕಥೆಯಲ್ಲಿ, ಬಡ ಹುಡುಗನೊಬ್ಬನಿಗೆ ಒಂದು ಕರಡಿ ಕೇಳಿದಷ್ಟು ಹಣ ಕೊಡುವ ಅಕ್ಷಯ ಪಾತ್ರೆಯನ್ನು ಕೊಡುತ್ತದೆ. ಅದನ್ನು ಮನೆಗೆ ತರುವಾಗ ದಾರಿಯಲ್ಲಿ ಒಬ್ಬ ಅಜ್ಜಿಯ ಮನೆಯಲ್ಲಿ ಹುಡುಗ ಉಳಿದುಕೊಳ್ಳುತ್ತಾನೆ. ಅಕ್ಷಯ ಪಾತ್ರೆಯ ಮಹಿಮೆ ತಿಳಿದ ಮುದುಕಿ ಹುಡುಗನಿಂದ ಅದನ್ನು ಕದ್ದುಕೊಂಡು ಅದೇ ಥರದ ಬೇರೊಂದು ಪಾತ್ರೆಯನ್ನು ಕೊಡುತ್ತಾಳೆ. ಮುದುಕಿಯ ಮರ್ಮ ತಿಳಿಯದ ಹುಡುಗ ಆ ಪಾತ್ರೆಯಿಂದ ಹಣ ಪಡೆಯುವುದರಲ್ಲಿ ವಿಫಲನಾಗುತ್ತಾನೆ. ಮತ್ತೊಮ್ಮೆ ಕರಡಿ ಮಂತ್ರದ ದೊಣ್ಣೆಯನ್ನು ಕೊಡುತ್ತದೆ. ಈ ದೊಣ್ಣೆಯು ಮುದುಕಿಯನ್ನು ಶಿಕ್ಷಿಸಿ, ಆದುವರೆಗೆ ಅವಳು ಹುಡುಗನಿಂದ ಕದ್ದಿದ್ದ ಸಾಧನಗಳನ್ನೆಲ್ಲ ಹಿಂದಿರುಗಿಸುವಂತೆ ಮಾಡುತ್ತದೆ.

ಅದೃಷ್ಟದ ಕೈವಾಡವೂ ಸಹ ಕಥೆಗಳಲ್ಲಿ ಕಂಡು ಬರುವ ವಿಶಿಷ್ಟ ಲಕ್ಷಣವಾಗಿದೆ. ನಾಯಕನ ಹೋರಾಟದಲ್ಲಿ, ಸಾಹಸ ಕಾರ್ಯಗಳಲ್ಲಿ ಅದೃಷ್ಟದ ಪಾತ್ರ ಪ್ರಧಾನವಾದದ್ದು. ಅದೃಷ್ಟವೇನಾದರೂ ಏರುಪೇರಾದಲ್ಲಿ ನಾಯಕ, ನಾಯಕಿಯ ಬದುಕು ಮೂರಾಬಟ್ಟೆ ಯಾಗುತ್ತದೆ. ನಾಯಕ ಒಳ್ಳೆಯವನಾಗಿದ್ದು, ಶಿಷ್ಟಶಕ್ತಿಯ ಪರವಾಗಿ, ನ್ಯಾಯದ ಪರವಾಗಿ ಹೋರಾಡುತ್ತಾನೆ. ಆಗ ಅದೃಷ್ಟ ನಾಯಕನ ಪಕ್ಷ ವಹಿಸುತ್ತದೆ. ಕಥೆಗಾರನ ತೀರ್ಮಾನವೂ ಸಹ ಸ್ವಾಭಾವಿಕವಾಗಿ ಅದೇ ಆಗಿರುವುದರಿಂದ ಅಂತ್ಯದಲ್ಲಿ ಧರ್ಮಕ್ಕೆ, ನೀತಿಗೇ ಜಯ.

ಜನಪದ ಕಥೆಗಳ ಶೈಲಿ ಅಪ್ಪಟ ಗ್ರಾಮೀಣವಾದುದು. ಮಾತಿನಲ್ಲಿ ಮಡಿವಂತಿಕೆಯಾಗಲಿ. ಶಿಷ್ಟತೆಯಾಗಲಿ ಕಂಡು ಬರುವುದಿಲ್ಲ. 'ಒಂದಾನೊಂದು ಕಾಲ, ಒಂದಾನೊಂದು ಊರು. ಒಬ್ಬ ದೊರೆ. ಅವನಿಗೆ ಏಳು ಜನ ಗಂಡು ಮಕ್ಕಳು. ಕೊನೆಯವನು ಕುಂಟ' ಹೀಗೆ ನಿಧಾನವಾಗಿ ಆರಂಭವಾಗುವ ಕಥೆಗಳು ಅಷ್ಟೇ ನಿಧಾನವಾಗಿ 'ಆಮೇಲೆ ಅವರು ಸುಖವಾಗಿದ್ದರು', 'ಅವರು ಅಲ್ಲಿ ಬಾಳ್ತಾ ಇದ್ರೆ, ನಾವು ಇಲ್ಲಿದ್ದೀವಿ' ಎಂತಲೋ 'ಕೊಟ್ಟಣ ಕುಟ್ಸಿ, ಪಟ್ನ, ಸಾರ್ಸಿ, ಕಾಣದವರೆಗೆ ನಾಲೆ ಬರದು, ಕಂಡವರಿಗೆ ಕರಪತ್ರ ಕಳಿಸಿ ಉಘೇ ಅಂತ ಮದುವೆ ಮಾಡ್ಕೊಂಡು ಸುಖವಾಗಿದ್ರು' ಅಂತಲೋ ಮುಕ್ತಾಯಗೊಳ್ಳುತ್ತವೆ.

ವಿಧಗಳು

ಕಥೆಗಳಲ್ಲಿ ವಾಕ್ ಸಂಪ್ರದಾಯದ ಕಥೆಗಳು ಮತ್ತು ಗ್ರಾಂಥಿಕ ಕಥೆಗಳು ಎಂದು ಎರಡು ವಿಧ. ಕಥೆ ತಲೆಮಾರಿನಿಂದ ತಲೆಮಾರಿಗೆ ಸಾಗಿ ಬರುವಾಗ ವಾಚಿಕ ಕಥೆ ಗ್ರಾಂಥಿಕ ಕಥೆಯಾಗಿಯೂ, ಗ್ರಾಂಥಿಕ ಕತೆ ವಾಚಿಕ ಕಥೆಯಾಗಿಯೂ ಮಾರ್ಪಡುವುದು ಸಹಜ. ಇಂತಹ ಬದಲಾಗುವ ಪ್ರವೃತ್ತಿಯಿಂದಾಗಿ ಜನಪದಕಥೆಯ ವಿವಿಧ ಪ್ರಕಾರಗಳನ್ನು ನಿರ್ದಿಷ್ಟ ಚೌಕಟ್ಟಿಗೆ ಅಳವಡಿಸಿ ಶುದ್ಧ ವರ್ಗೀಕರಣಕ್ಕೆ ಒಳಪಡಿಸುವುದು ಕಷ್ಟವಾಗಿದೆ. ಅಲ್ಲದೆ ಜನಪದ ಕಥೆಗಳು ಜಗತ್ತಿನಾದ್ಯಂತ ಕಂಡು ಬರುವುದರಿಂದ ಈ ಕೆಲಸ ಮತ್ತಷ್ಟು ಕಷ್ಟ. ಅಧ್ಯಯನದ ಸೌಕರ್ಯಕ್ಕಾಗಿ ಹಲವಾರು ವಿದ್ವಾಂಸರು ಕಥೆಗಳನ್ನು ನಾನಾ ಬಗೆಗಳಾಗಿ ವರ್ಗೀಕರಿಸಿರುತ್ತಾರಾದರೂ ಅವುಗಳಲ್ಲಿ ಯಾವೊಂದು ವಿಧಾನವೂ ಪರಿಪೂರ್ಣವೂ, ಸಮರ್ಪಕವೂ ಆಗಿ ಕಂಡು ಬರುವುದಿಲ್ಲ.

ಸದ್ಯಕ್ಕೆ ಸ್ಮಿತ್ ಥಾಂಸನ್ ಎಂಬ ಜನಪದ ವಿದ್ವಾಂಸರು ಮಾಡಿರುವ ವರ್ಗೀಕರಣವು ತಕ್ಕಮಟ್ಟಿಗೆ ಸಮಗ್ರವೂ, ವೈಜ್ಞಾನಿಕವೂ ಆಗಿರುವುದರಿಂದ ಅದನ್ನೇ ಇಲ್ಲಿ ಆಧಾರವಾಗಿ ಇಟ್ಟುಕೊಳ್ಳಬಹುದು. ಸ್ಮಿತ್ ಥಾಂಸನ್ನರು ಜಗತ್ತಿನ ಎಲ್ಲಾ ಜನಪದ ಕಥೆಗಳನ್ನು ಒಟ್ಟಾರೆಯಾಗಿ ಸರಳಕಥೆಗಳು ಮತ್ತು ಸಂಕೀರ್ಣಕಥೆಗಳು ಎಂದು ಎರಡು ವಿಭಾಗಗಳಾಗಿ ವಿಂಗಡಿಸಿದ್ದಾರೆ. ಸರಳಕಥೆಗಳಲ್ಲಿ ವಿನೋದ ಕಥೆಗಳು, ಪ್ರಾಣಿಕಥೆಗಳು, ಸೂತ್ರಕಥೆಗಳು, ಐತಿಹ್ಯಗಳು ಮತ್ತು ಸಂಪ್ರದಾಯಕ್ಕೆ ಸೇರಿದ ಕಥೆಗಳು ಸೇರುತ್ತವೆ. ಸಂಕೀರ್ಣಕಥೆಗಳಲ್ಲಿ ಕಟ್ಟುಕಥೆಗಳು ಮತ್ತು ವಾಸ್ತವಿಕ ಕಥೆಗಳು ಸೇರುತ್ತವೆ.

ಸಂಕೀರ್ಣಕಥೆಗಳಲ್ಲಿ ಆಶಯಗಳು ಹೆಚ್ಚಿಗೆ ಇರುತ್ತವೆ. ತುಂಬಾ ದೀರ್ಘವಾಗಿರುತ್ತವೆ. ಕಥೆಯ ತಂತ್ರ ತುಂಬಾ ಜಟಿಲವಾಗಿರುತ್ತದೆ. ಅತಿಮಾನುಷ ಅಂಶಗಳು ಸಾಕಷ್ಟಿರುತ್ತವೆ. ಅತಿಮಾನುಷ ಪ್ರೇಮಿಗಳು ಹಾಗೂ ದಂಪತಿಗಳು. ಅತಿಮಾನುಷ ಗಂಡಂದಿರು, ಪರೀಕ್ಷೆಗಳು ಮತ್ತು ಸಾಹಸಗಳು, ವಿಧೇಯತೆ, ಒಳ್ಳೆಯ ಹಾಗೂ ಕೆಟ್ಟ ಬಂಧುಗಳು. ಅತೀತ ಶಕ್ತಿಗಳು, ಮೂರು ಲೋಕಗಳು ಮುಂತಾದ ಅಂಶಗಳೆಲ್ಲವೂ ಇಂತಹ ಕಥೆಗಳಲ್ಲಿ ಕಂಡು ಬರುತ್ತವೆ. ಇವು ನಿಜ ಜೀವನದ ಸಂಗತಿಗಳಿಗೆ ದೂರವಾಗಿದ್ದು ಅಮಾನುಷವಾದ ಪ್ರಸಂಗಗಳನ್ನು ಆಧಾರವಾಗಿಟ್ಟು ಕೊಂಡಿರುತ್ತವೆ.

ಉದಾಹರಣೆಗೆ ಒಂದೆರಡು ಕಥೆಗಳನ್ನು ನೋಡಬಹುದು: 'ಏಡಿ ಕುಮಾರನ ಕಥೆ'ಯಲ್ಲಿ ಮಕ್ಕಳಿಲ್ಲದ ರಾಣಿ ಮರಿಗಳೊಂದಿಗೆ ಆಡುತ್ತಿರುವ ಏಡಿಯ ಸಂತೋಷವನ್ನು ಕಂಡು ತನಗೂ ಮಕ್ಕಳಾಗಿದ್ದರೆ ಎಷ್ಟು ಚೆನ್ನಾಗಿತ್ತು ಎಂದುಕೊಳ್ಳುತ್ತಾಳೆ. ಅಂದುಕೊಂಡಂತೆ ಗರ್ಭಿಣಿಯಾಗಿ ಏಡಿಯೊಂದನ್ನು ಹೆರುತ್ತಾಳೆ. ಏಡಿ ದಿನ ದಿನಕ್ಕೂ ಬೆಳೆದು ಬೃಹದಾಕಾರವಾಗಿ, ತನಗೆ ಮದುವೆ ಮಾಡಬೇಕೆಂದೂ ಇಲ್ಲವಾದರೆ ಇಡೀ ಪಟ್ಟಣವನ್ನೇ ನಾಶ ಮಾಡುವುದಾಗಿಯೂ ಬೆದರಿಸುತ್ತದೆ. ಆಗ ಮಲತಾಯಿಯೊಬ್ಬಳು ತನ್ನ ಮಲಮಗಳನ್ನು ಏಡಿಗೆ ಮದುವೆ ಮಾಡಿಕೊಡಲು ಒಪ್ಪುತ್ತಾಳೆ. ಮದುವೆಯಾದ ರಾತ್ರಿ ಏಡಿ ಆ ಹುಡುಗಿಯನ್ನು ಕಡಿದು ಹಾಕುತ್ತದೆ. ಮತ್ತೆ ಮದುವೆ ಮಾಡಿಕೊಡಬೇಕೆಂದು ಬೆದರಿಕೆ ಹಾಕುತ್ತದೆ. ಹಿಂದಿನ ಮಲತಾಯಿಯೇ ತನ್ನ ಮತ್ತೊಬ್ಬ ಮಲಮಗಳನ್ನು ಏಡಿಗೆ ಮದುವೆ ಮಾಡಿಕೊಡಲು ಒಪ್ಪುತ್ತಾಳೆ. ಆ ಮಲಮಗಳು ತನ್ನ ಅಕ್ಕನಿಗೆ ಒದಗಿದ ದುರ್ಗತಿಯನ್ನು ನೆನೆದು ಶೋಕ ಮಾಡುತ್ತಿರುವಾಗ ಶಿವಪಾರ್ವತಿಯರು ಅವಳ ಮೇಲೆ ಕರುಣೆ ತೋರಿ ಅವಳಿಗೆ ಕೆಲವು ಮಂತ್ರದ ಕಲ್ಲುಗಳನ್ನು ಕೊಡುತ್ತಾರೆ. ಮದುವೆಯಾದ ರಾತ್ರಿ ಏಡಿ ಅವಳನ್ನು ತಿನ್ನಲು ಬಂದಾಗ ಆಕೆ ಶಿವ ಪಾರ್ವತಿಯರು ಕೊಟ್ಟ ಮಂತ್ರದ ಕಲ್ಲುಗಳನ್ನು ಆ ಏಡಿಯ ಮೇಲೆ ಹಾಕುತ್ತಾಳೆ. ಏಡಿಯು ಸುಂದರ ರಾಜಕುಮಾರನಾಗಿ ಬದಲಾವಣೆಯಾಗುತ್ತದೆ. ಅವರಿಬ್ಬರೂ ಸುಖವಾಗಿರುತ್ತಾರೆ.

ಇದೇ ರೀತಿಯ ಮತ್ತೊಂದು ಕಥೆ 'ಹಾವಾಗಿ ಹರಿದ ಅಣ್ಣಯ್ಯ' ಇದರಲ್ಲಿ ಕ್ರೂರಿಯಾದ ಮಲತಾಯಿ ತನ್ನ ಮಲಮಗಳಿಗೆ ನೀರಿನಲ್ಲಿ ಹಾವಿನ ಮರಿ ಹಾಕಿ ಕುಡಿಸಿ ಬಿಡುತ್ತಾಳೆ. ಅವಳ ದೇಹದಲ್ಲಿ ಸೇರಿದ ಹಾವು ಹೊರಬಂದಾಗ ಆಕೆಯ ಅಣ್ಣ ಅದನ್ನು ಕೊಲ್ಲುತ್ತಾನೆ. ಹಾವನ್ನು ಕೊಂದ ಜಾಗದಲ್ಲಿ ಒಂದು ಹೂವಿನ ಗಿಡ ಬೆಳೆಯುತ್ತದೆ. ಹುಡುಗಿ ತಿಳಿಯದೆ ಆ ಹೂವನ್ನು ಕಿತ್ತು ಅಣ್ಣನಿಗೆ ಮುಡಿಸಿದಾಗ ಆತ ಹಾವಾಗಿ ಹರಿದು ಹುತ್ತ ಸೇರುತ್ತಾನೆ. ಬೇಟೆಗೆ ಬಂದ ರಾಜಕುಮಾರ ಆಕೆಯನ್ನು ಮದುವೆಯಾಗಿ ಅವಳ ದುಃಖ ಏನೆಂಬುದನ್ನು ತಿಳಿದು, ಪುಂಗಿ ಊದಿಸಿ ಹುತ್ತಗಳಲ್ಲಿದ್ದ ಹಾವುಗಳನ್ನೆಲ್ಲಾ ಹೊರಗೆ ಬರುವಂತೆ ಮಾಡುತ್ತಾನೆ. ಆಗ ಒಂದು ಹಾವಿನ ಹೆಡೆಯ ಮೇಲಿದ್ದ ಹೂವನ್ನು ತೆಗೆದಾಗ ಅಣ್ಣ ಮರಳಿ ಮಾನವ ರೂಪಕ್ಕೆ ಬರುತ್ತಾನೆ.

ಜನಪದ ಕಥೆಗಳಲ್ಲಿ ಸುಲಭವಾಗಿ ಹಾಗೂ ಸಮೃದ್ಧವಾಗಿ ಸಂಕೀರ್ಣ ಕಥೆಗಳು ದೊರೆಯುತ್ತವೆ. ಈ ಕಥೆಗಳಲ್ಲಿರುವ ಅದ್ಭುತ ರಂಜಕತೆ ಹಾಗೂ ಸಾಹಸ ಪ್ರಿಯತೆಗಳು



''ಹಾವಾಗಿ ಹರಿದ ಅಣ್ಣಯ್ಯ''

ಓದುಗರನ್ನು ಸೂರೆಗೊಳ್ಳುತ್ತವೆ. ಕೇಳುಗರನ್ನು ರಂಜಿಸುತ್ತವೆ. ಒಂದಾನೊಂದು ಊರಿನಲ್ಲಿ. ಒಂದಾನೊಂದು ಕಾಲದಲ್ಲಿ ನಡೆಯುವ ಈ ಕಥೆಗಳ ತುಂಬಾ ರಾಜರಾಣಿಯರು. ರಾಕ್ಷಸರು, ಮಾಯಾವಿಗಳು, ಭೂತ ಬೇತಾಳಗಳು ತುಂಬಿರುತ್ತವೆ. ಕುಂಟನು, ನಿರ್ಗತಿಕನು, ಕೈಲಾಗದವನು ಆಗಿ ಕಾಣಿಸಿಕೊಳ್ಳುವ ನಾಯಕ ಅತಿಮಾನುಷ ಸಹಾಯಕರು, ಮಾಟದ ವಸ್ತುಗಳ ನೆರವಿನಿಂದ ಅಸಾಧ್ಯವಾದ ಸಾಹಸಗಳನ್ನು ಕೈಗೊಂಡು ಕೊನೆಗೆ ನಾಯಕಿಯ ವಿವಾಹದೊಂದಿಗೆ ಕಥೆ ಮುಕ್ತಾಯಗೊಳ್ಳುತ್ತದೆ. ಸಾಕಷ್ಟು ಸುದೀರ್ಘವಾಗಿದ್ದು ಹಲವಾರು ಆಶಯಗಳು ಬರುತ್ತವೆ ಹಾಗೂ ಇಂತಹ ಆಶಯಗಳಿಂದಲೇ ಕಥೆ ಹೆಚ್ಚು ಹೆಚ್ಚು ಬೆಳೆಯುತ್ತಾ ಹೋಗುತ್ತದೆ.

ಸರಳ ಕಥೆಗಳು ತುಂಬಾ ಸಂಕ್ಷಿಪ್ತವಾದುವು. ಸಂಕೀರ್ಣ ಕಥೆಗಳಲ್ಲಿ ಕಂಡು ಬರುವ ತಂತ್ರದ ಕ್ಲಿಷ್ಟತೆಯಾಗಲಿ, ಅತಿಮಾನುಷ ಅಂಶಗಳಾಗಲಿ ಇಲ್ಲಿರುವುದಿಲ್ಲ. ಇವುಗಳ ವಸ್ತು ನಿಜಜೀವನಕ್ಕೆ ಹತ್ತಿರವಾದದ್ದು. ದೈನಂದಿನ ಬದುಕಿನ ವಿಶೇಷ ಸಂಗತಿಗಳ ಉತ್ಪ್ರೇಕ್ಷೆಯ ವಿವರಣೆಯೇ ಈ ಕಥೆಗಳ ಸ್ವಾರಸ್ಯಕರವಾದ ಅಂಶ. ಸರಳ ಕಥೆಗಳಲ್ಲಿ ಬಹು ಪ್ರಧಾನವಾದ ಭಾಗ ವಿನೋದಕಥೆಗಳದು. ಸುಳ್ಳು, ವಂಚನೆ, ಮೋಸ, ಕಪಟ, ಜಾಣ, ದಡ್ಡ, ಭ್ರಷ್ಟಾಚಾರ, ಕೆಟ್ಟ ಹೆಂಡಿರು, ಸೋಂಬೇರಿಗಳು, ಕುರುಡ, ಕುಂಟ, ಕಿವುಡ, ಮೂಗರ ಕಥೆಗಳು, ವಿನೋದ ಕಥೆಗಳ ಗುಂಪಿಗೆ ಸೇರುತ್ತವೆ. ಮೂರ್ಖರ ವರ್ತನೆಗಳನ್ನು ಉತ್ಪ್ರೇಕ್ಷಿಸಿ ನಗೆ ಹುಟ್ಟಿಸುವುದು ಈ ಕಥೆಗಳ ಉದ್ದೇಶ.

ಪೆದ್ದರ ನಡವಳಿಕೆಗಳನ್ನು ತಿದ್ದಲು ಹೋಗಿ ಮತ್ತಷ್ಟು ಅನರ್ಥಗಳಿಗೆ ಕಾರಣವಾಗುವುದನ್ನು, ಪೆದ್ದುತನದ ವಿವಿಧ ಆಯಾಮಗಳನ್ನು, ವಿನೋದ ಕಥೆಗಳು ಪರಿಚಯಿಸುತ್ತವೆ. ಉದಾಹರಣೆಗೆ 'ಪೆದ್ದ' ಕಥೆಯಲ್ಲಿ ಪೆದ್ದನೊಬ್ಬ ಬೆಲೆಬಾಳುವ ವಸ್ತುವನ್ನು ಕೊಟ್ಟು ಕೆಲಸಕ್ಕೆ ಬಾರದ ವಸ್ತುವನ್ನು ತೆಗೆದುಕೊಂಡು ಅಪಾರ ಕಷ್ಟ ಅನುಭವಿಸುತ್ತಾನೆ. ಹೊಸದಾಗಿ ಮದುವೆಯಾದ ಹೆಂಡತಿಯನ್ನು ತವರೂರಿನಿಂದ ಕರೆದುಕೊಂಡು ಬರುವಾಗ, ಹಣ ಇಲ್ಲದ್ದಕ್ಕೆ ಹೆಂಡತಿಯನ್ನು ಮಾರಿ ಟಗರು ಕೊಳ್ಳುತ್ತಾನೆ. ಟಗರು ಕೊಟ್ಟಾತ ಅದರ ಗುಣವನ್ನು ತಪ್ಪಾಗಿ ತಿಳಿಸಿದ್ದರಿಂದ ಪೆದ್ದ ಅದರಿಂದ ಏಟು ತಿನ್ನಬೇಕಾಗಿ ಬರುತ್ತದೆ. ನಂತರ ಟಗರು ಮಾರಿ ಹಲಸಿನಹಣ್ಣನ್ನು ಕೊಳ್ಳುತ್ತಾನೆ. ಅದನ್ನು ಹೊತ್ತುಕೊಳ್ಳುವ ತಪ್ಪು ವಿಧಾನದಿಂದಾಗಿ ತಲೆಗೆ ಅಂಟಿಕೊಂಡ ಹಲಸಿನ ಹಣ್ಣನ್ನು ಬೇರ್ಪಡಿಸಲು ತಲೆಯನ್ನೇ ಬೋಳಿಸಿಕೊಳ್ಳಬೇಕಾಗಿ ಬರುತ್ತದೆ.

'ಪೆದ್ದಂಭಟ್ಟ' ಎನ್ನುವ ಕಥೆಯಲ್ಲಿ ಪೆದ್ದನೊಬ್ಬ ರೋಗಿಗೆ ಮುತ್ತುವ ನೊಣಗಳನ್ನು ಓಡಿಸುವ ಸಲುವಾಗಿ ರಾಗಿಕಲ್ಲನ್ನೇ ರೋಗಿಯ ಮೇಲೆ ಎತ್ತಾಕಿ ಸಾವಿಗೆ ಕಾರಣವಾದದ್ದು, ಗಾಡಿ ಚಕ್ರಗಳಿಗೆ ಕೀಲೆಣ್ಣೆ ಹಾಕದಿದ್ದುದರಿಂದ ಚಕ್ರಗಳು ಕಿರ್ ಕಿರ್ ಎನ್ನುತ್ತಿದ್ದರೆ ದೆವ್ವ ಗಾಡಿಗೆ ಹೊಕ್ಕಿದೆ ಎಂದು ಸವುದೆ ಗಾಡಿಗೇ ಬೆಂಕಿ ಇಟ್ಟಿದ್ದು, ಕಳ್ಳರಿಗೆ ತೋರಿಸಬೇಡ ಎಂದು ಮರ ಹತ್ತಿ ಕುಳಿತ ನಾಲ್ಕು ಮಂದಿ ಶೆಟ್ಟರನ್ನು ತಪ್ಪುತಪ್ಪಾಗಿ ಹೇಳಿ ಕಳ್ಳರಿಗೆ ತೋರಿಸಿ ಶೆಟ್ಟರ ಸಾವಿಗೆ ಕಾರಣವಾದದ್ದು ಮುಂತಾದ ದುರಂತಗಳಿಗೆ ಪೆದ್ದುತನ ಹೇಗೆ ಕಾರಣವಾಗುತ್ತದೆಂಬುದನ್ನು ನವಿರಾದ ಹಾಸ್ಯದೊಂದಿಗೆ ಕಥೆ ತಿಳಿಸಿಕೊಡುತ್ತದೆ.

ಸಂಕ್ಷಿಪ್ತತೆ, ನಾಟಕೀಯತೆ, ಗೂಢಾರ್ಥತೆಯೇ ವಿನೋದ ಕಥೆಗಳ ಗುಣಗಳು. ವಿನೋದವನ್ನು ಉಂಟು ಮಾಡುವುದೇ ಇದರ ಪರಮಗುರಿಯಾಗಿರುತ್ತದೆ. ದಡ್ಡರಿಗೆ ಆವರ ಅಸಂಬದ್ಧ ವರ್ತನೆ, ಕಲ್ಪನೆಗಳಿಗೆ ಸಂಬಂಧಿಸಿದ ಅಸಂಖ್ಯಾತ ಕತೆಗಳು ಈ ಗುಂಪಿನಲ್ಲಿವೆ. ದಡ್ಡರ ದಡ್ಡತನ ವಿಚಿತ್ರವಾದುದಾದರೂ ಅವರ ಕಲ್ಪನಾ ಸಾಮರ್ಥ್ಯ ಅದ್ಭುತವಾದದ್ದು. ಬೂದುಗುಂಬಳ ಕಾಯಿಯನ್ನು ಕುದುರೆಯ ಮೊಟ್ಟೆ ಎಂದು, ಕಲ್ಲಂಗಡಿ ಹಣ್ಣನ್ನು ಕತ್ತೆಯ ಮೊಟ್ಟೆ ಎಂದು ಭಾವಿಸುವುದು, ಪಕ್ಕದಲ್ಲಿ ಮೊಲ ಓಡಿ ಹೋದರೆ ಅದು ಮೊಟ್ಟೆ ಒಳಗಿನಿಂದ ಬಂದಿತೆನ್ನುವುದು ಇತ್ಯಾದಿ ವಿನೋದ ಕಥೆಗಳು ನಿರ್ದಿಷ್ಟ ಕಾಲ ದೇಶ ಸ್ಥಳಕ್ಕೆ ಸೀಮಿತವಲ್ಲದೆ, ಜಗತ್ತಿನ ಎಲ್ಲೆಡೆಯಲ್ಲೂ ಕಂಡು ಬರುವ ಜನಪ್ರಿಯ ಪ್ರಕಾರವಾಗಿದೆ.

'ಜನಪದ ಕಥೆಗಳಲ್ಲೇ ಅತ್ಯಂತ ಪ್ರಾಚೀನವಾದುದು ಪ್ರಾಣಿಕಥೆ. ಮಾನವನ ನಾಗರಿಕತೆಯ ಪೂರ್ವಸ್ಥಿತಿಯ ಸೃಷ್ಟಿ ಇದೆಂದು' ಜಾನಪದ ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಪ್ರಾಣಿಕಥೆಗಳಲ್ಲಿ ಕಾಣಿಸಿಕೊಳ್ಳುವ ಪ್ರಾಣಿಪ್ರಪಂಚ. ಮನುಷ್ಯಪ್ರಪಂಚಕ್ಕಿಂತ ಬೇರೆಯಾದುದಲ್ಲ. ರೂಪವನ್ನು ಹೊರತುಪಡಿಸಿದರೆ ಮತ್ಯಾವ ವಿಷಯದಲ್ಲೂ ಅವು ಪ್ರಾಣಿಗಳಲ್ಲ, ಮನುಷ್ಯರಂತೆಯೇ ವರ್ತಿಸುತ್ತವೆ. ಅಲ್ಲದೆ, ಅವುಗಳಿಗೆ ಅತಿಮಾನುಷ, ಮಾಂತ್ರಿಕ ಶಕ್ತಿ ಇರುತ್ತದೆ. ಕಥಾನಾಯಕನಿಗೆ ಪ್ರಧಾನ ಸಹಾಯಕರಾಗಿ ನಿಲ್ಲುವ ಈ ಪ್ರಾಣಿಗಳು ಅವನಿಗಿಂತ ಹೆಚ್ಚಿನ ಕೆಲಸ ನಿರ್ವಹಿಸುತ್ತವೆ. ಈ ಭಾಗದಲ್ಲಿ ಬುದ್ಧಿವಂತ ಪ್ರಾಣಿಯಾದ ನರಿಗೆ ಹೆಚ್ಚಿನ ಪ್ರಾಧಾನ್ಯತೆ. ಉದಾಹರಣೆಗೆ 'ಮೊಸಳೆ-ನರಿ' ಎನ್ನುವ

ಕಥೆಯಲ್ಲಿ ಒಮ್ಮೆ ಮೀನು ಹಿಡಿಯಲು ನೀರಿಗೆ ಹೋದ ನರಿಯ ಕಾಲನ್ನು ಮೊಸಳೆ ಹಿಡಿದಾಗ 'ನೀನು ಹಿಡಿದಿರುವುದು ನನ್ನ ಕಾಲನ್ನಲ್ಲ: ಹೊಂಗೆ ಬೇರನ್ನು' ಎಂದು ನರಿ ಹೇಳಿದ ಕೂಡಲೆ ಮೊಸಳೆ ನರಿಯ ಕಾಲು ಬಿಟ್ಟು ಬೇರಿಗೆ ಬಾಯಿ ಹಾಕುತ್ತದೆ. ತಾನು ಮೋಸಹೋದೆ ಎಂದು ಮೊಸಳೆಗೆ ಅರಿವಾಗಿ ಆ ನರಿಯನ್ನು ಹೇಗಾದರೂ ಹಿಡಿಯಬೇಕೆಂದು ನರಿಯ ಗವಿಯಲ್ಲಿ ಅಡಗಿ ಕುಳಿತುಕೊಳ್ಳುತ್ತದೆ. ಹೆಜ್ಜೆಯ ಗುರುತಿನಿಂದ ವಿಷಯದ ಸುಳಿವು ಸಿಕ್ಕ ನರಿ ಅದನ್ನು ಖಚಿತಪಡಿಸಿಕೊಳ್ಳಲು 'ನಾನು ಪ್ರತಿದಿನ ಹೊರಗಿನಿಂದ ಬಂದು ಮನೆ ಅಂತ ಕೂಗಿದರೆ ಅದು ಓ ಎನ್ನುತ್ತದೆ' ಎಂದು ಹೇಳುತ್ತದೆ. ದಡ್ಡ ಮೊಸಳೆ ಅದನ್ನು ನಿಜವೆಂದೇ ನಂಬಿ ಓ ಎನ್ನುತ್ತದೆ. ಗುಹೆಯ ಬಾಗಿಲಿಗೆ ಬೆಂಕಿ ಹಚ್ಚಿ ನರಿ ಮೊಸಳೆಯನ್ನು ಕೊಲ್ಲುತ್ತದೆ.

ಮಾತಿನ ಚಮತ್ಕಾರಕ್ಕಾಗಿ, ಮನರಂಜನೆಗಾಗಿ ಹೆಣೆಯಲ್ಪಟ್ಟ ಕಥೆಯೇ ಸೂತ್ರಕಥೆ. ಮಾತುಗಳ ಪ್ರತಿಬದ್ಧ ರಚನೆ ಭಾಷೆಯ ವೈಶಿಷ್ಟ್ಯ. ಸೂತ್ರ ಕಥೆಗಳಲ್ಲಿ ಪ್ರಾಣಿಗಳು, ಮನುಷ್ಯರು ಪೂರಕ ಪಾತ್ರವಹಿಸುತ್ತಾರೆ. ಕಥೆ ಬೆಳೆದಂತೆಲ್ಲಾ ವಿವರಗಳ ಸೇರ್ಪಡೆಯೊಂದಿಗೆ ಪುನರಾವರ್ತನೆಯಾಗುತ್ತ ಹೋಗುತ್ತದೆ. ಮೊದಲಿನಿಂದ ಕಡೆಯವರೆಗಿನ ವಿವರಗಳು ಈ ಸೂತ್ರದಲ್ಲಿ ಅಡಕವಾಗಿರುತ್ತವೆ. 'ಸೂತ್ರಕಥೆ ನಿಜವಾದ ಒಂದು ಕನಿಷ್ಟಕಥನವನ್ನು ಹೊಂದಿರುತ್ತದೆ. ಅದರಲ್ಲಿನ ಕೇಂದ್ರ ವಸ್ತು ಒಂದು ಕಥನ ಮಾದರಿಯ ಕೆಲಸ ಮಾಡಲು ಆಧಾರವಾಗಿದೆ. ಕಥೆಯಲ್ಲಿ ಏನು ನಡೆಯುತ್ತಿದೆ ಎಂಬುದು ಮುಖ್ಯವಲ್ಲ. ಒಂದು ನಿರ್ದಿಷ್ಟ ಸ್ವರೂಪಕ್ಕಾಗಿಯೇ ಕಥೆಯನ್ನು ಹೇಳಿರುವುದು ಎಂಬುದು ಗಮನಾರ್ಹ' ಸರಪಳಿ ಕತೆಗಳು ಎಂದು ಸಹ ಕರೆಯಲಾಗುವ ಇಂತಹ ಕಥೆಗಳು ಒಂದು ಆಟದಂತಿದ್ದು ವಿನೋದವನ್ನು, ಸೌಂದರ್ಯನುಭವವನ್ನು ನೀಡುತ್ತದೆ.

ಉದಾಹರಣೆಗೆ 'ಮೋಟು ಬಾಲದ ಕೋತಿ' ಕಥೆಯಲ್ಲಿ ಕೋತಿಯ ಬಾಲಕ್ಕೆ ಮುಳ್ಳು ಚುಚ್ಚುತ್ತದೆ. ಅದನ್ನು ತೆಗೆಯಲು ಕ್ಷೌರಿಕನ ಕತ್ತಿ ತೆಗೆದುಕೊಳ್ಳುತ್ತದೆ. ಮುದುಕಿಗೆ ಹುಲ್ಲು ಕೊಯ್ಯಲು ಕತ್ತಿಕೊಡುತ್ತದೆ. ಕತ್ತಿ ಮುರಿದಾಗ ಹುಲ್ಲಿನ ಹೊರೆ ಪಡೆದುಕೊಳ್ಳುತ್ತದೆ. ಹೀಗೆ ತನ್ನ ಬಳಿಗೆ ಬಂದ ಪ್ರತಿಯೊಬ್ಬರಿಂದಲೂ ವಸ್ತುಗಳನ್ನು ಕೊಡುತ್ತಾ, ವಸ್ತುಗಳನ್ನು ಪಡೆಯುತ್ತಾ ಹೋಗುತ್ತದೆ. ಕೊನೆಯಲ್ಲಿ ಹಸುವಿಗೆ ಬದಲಾಗಿ ಹೆಣ್ಣು ಪಡೆಯುತ್ತದೆ. ಆಕೆಯನ್ನು ಮತ್ತೊಬ್ಬನಿಗೆ ಕೊಟ್ಟು ಡೋಲು ಪಡೆಯುತ್ತದೆ. ಕತೆಯ ಅಂತ್ಯದಲ್ಲಿ ಕೋತಿ ಡೋಲು ಬಾರಿಸುತ್ತಾ ಹಾಡು ಹೇಳುತ್ತದೆ. ಈ ಹಾಡು ಸರಪಳಿ ರೂಪದಲ್ಲಿದ್ದು ಕಥೆಯ ಎಲ್ಲಾ ಘಟನೆಗಳನ್ನು ಒಳಗೊಳ್ಳುತ್ತದೆ.

ಬಾಲ ಹೋಯ್ತು ಕತ್ತಿ ಬಂತು ಡುಂಡುಂ
ಕತ್ತಿ ಹೋಯ್ತು ಹುಲ್ಲು ಬಂತು ಡುಂಡುಂ
ಹುಲ್ಲು ಹೋಯ್ತು ಬೆಲ್ಲ ಬಂತು ಡುಂಡುಂ

ಸೂತ್ರ ಕಥೆಗಳಲ್ಲಿ ಕಥಾ ಸಂವಿಧಾನವಾಗಲಿ, ಪಾತ್ರಗಳ ಬೆಳವಣಿಗೆಯಾಗಲಿ ಮುಖ್ಯವಲ್ಲ. ಕಥೆಯ ರೂಪವೊಂದೇ ಮುಖ್ಯ. ಸನ್ನಿವೇಶ, ಘಟನೆಗಳು ತುಂಬಾ ಸರಳವಾಗಿದ್ದು ಅದನ್ನು ಬಳಸುವ ಕೌಶಲ್ಯ ಎದ್ದು ಕಾಣುತ್ತದೆ.

ಪ್ರಾಣಿಕಥೆಗಳ ಮುಂದುವರಿದ ರೂಪವೇ ನೀತಿ ಕಥೆ. ರಚನೆಯಲ್ಲಿ ತುಂಬಾ ಚಿಕ್ಕದಾದ ನೀತಿಕಥೆಯ ಉದ್ದೇಶ ನೀತಿ ಬೋಧನೆಯಾಗಿರುತ್ತದೆ. ಬಹುಪಾಲು ಪ್ರಾಣಿಗಳೇ ಈ ಕಥೆಗಳ ಪಾತ್ರಧಾರಿಗಳು. ಮಹಾರಾಷ್ಟ್ರದ ಜಾನಪದ ವಿದ್ವಾಂಸರಾದ ದುರ್ಗಾಭಾಗವತ್ 'ನೀತಿಕಥೆಗಳು ಪ್ರಾಣಿಕಥೆಗಳಿಗಿಂತ ಪ್ರಾಚೀನವಾದುವುಗಳೆಂದು' ಅಭಿಪ್ರಾಯಪಡುತ್ತಾರೆ. ಆದರೆ ಇದು ನಾಗರಿಕತೆಯ ಪೂರ್ವಸ್ಥಿತಿಯ ಸೃಷ್ಟಿಯಾಗಿರದೆ ನಾಗರಿಕತೆ ಸಂಸ್ಕೃತಿಗಳು ಸಾಕಷ್ಟು ಬೆಳವಣಿಗೆ ಹೊಂದಿದ ಅನಂತರದ ಕಾಲದ ಸೃಷ್ಟಿ. ಅಲ್ಲದೆ, ನೀತಿಕಥೆ ಮೂಲತಃ ಸಾಹಿತ್ಯದ ಸೃಷ್ಟಿಯಾಗಿದ್ದು, ಅನಂತರ ಜಾನಪದ ಸಂಪ್ರದಾಯಕ್ಕೆ ಬಂದಿರಬೇಕೆಂಬುದು ವಿದ್ವಾಂಸರ ಮತ.

ಸೂರ್ಯ, ಚಂದ್ರ, ನಕ್ಷತ್ರ, ಋತುಮಾನಗಳು, ನಿಸರ್ಗದ ವೈಪರೀತ್ಯಗಳು ರೂಢಿಯಲ್ಲಿವೆ. ದಿನನಿತ್ಯ ಇವುಗಳ ಸಂಪರ್ಕದಲ್ಲಿರುವ ಮನುಷ್ಯನಿಗೆ ಇವುಗಳ ಬಗ್ಗೆ ಸಹಜವಾಗಿಯೇ ಕುತೂಹಲ, ವಿಸ್ಮಯ, ಕೌತುಕಗಳಿರುವುದರಿಂದ ಈ ಕಥೆಗಳ ಹುಟ್ಟಿಗೆ ಕಾರಣವಾಗಿದೆ. ಅಂತೆಯೇ ಗಾದೆ, ಒಗಟು ಕಥೆಗಳೂ ಸಹ ಲಭ್ಯ ಇವೆ. ಕಥೆಯ ರೂಪದಲ್ಲಿರುವ ಒಗಟುಗಳೆ ಒಗಟುಗೀತೆಗಳಾಗಿ ಪರಿಣಮಿಸಿವೆ.

ಮೇಲ್ಕಂಡಂತೆ ಕಥೆಗಳ ವರ್ಗೀಕರಣವನ್ನು ಕೈಗೊಂಡರೂ ಸಹ ಇಂತಿಷ್ಟೇ ಎಂದು ಗೆರೆ ಕೊರೆದಂತೆ ವರ್ಗೀಕರಿಸಲು ಸಾಧ್ಯವಾಗುವುದಿಲ್ಲ. ಎಷ್ಟೇ ಎಚ್ಚರ ವಹಿಸಿದರೂ ಒಂದರಲ್ಲಿ ಮತ್ತೊಂದು ಕಾಣಿಸಿಕೊಳ್ಳುದನ್ನು ತಪ್ಪಿಸಲಾಗುವುದಿಲ್ಲ. ಆಯಾ ಪ್ರಕಾರದ ಕಥೆಗಳಲ್ಲಿ ಪ್ರಧಾನವಾಗಿ ಎದ್ದು ಕಾಣುವ ಲಕ್ಷಣಗಳನ್ನು ಗಮನದಲ್ಲಿರಿಸಿಕೊಂಡು ಕಥೆಗಳನ್ನು ವರ್ಗೀಕರಿಸಬಹುದಷ್ಟೆ.

ಜನಪದ ಕಥೆಗಳ ವರ್ಗೀಕರಣದಲ್ಲಿ ಆಶಯ ಮತ್ತು ವರ್ಗ ಬಹು ಮುಖ್ಯ ಪಾತ್ರ ವಹಿಸುತ್ತದೆ. ಆಶಯ ಕಥೆಯ ವಸ್ತುವನ್ನು ಕುರಿತದ್ದಾದರೆ, ವರ್ಗ ಅದರ ತಾಂತ್ರಿಕ ಸ್ವರೂಪವನ್ನು ಕುರಿತದ್ದಾಗಿದೆ. ಕಥೆಯ ಅತ್ಯಂತ ಚಿಕ್ಕ ಘಟಕ ಅಥವಾ ಮೂಲಾಂಶವೇ ಆಶಯ. ಇವು ಕೆಲವು ವೇಳೆ ಸರಳ ಕಲ್ಪನೆಗಳಾಗಿದ್ದರೂ ಸ್ವಾಭಾವಿಕವಾಗಿರದೆ ಅದ್ಭುತವೂ, ಅಸಾಮಾನ್ಯವೂ ಆಗಿರುತ್ತವೆ. ಮಾಟಗಾತಿ, ಮಂತ್ರವಾದಿ, ಮಲತಾಯಿ, ರಾಕ್ಷಸ, ಮಾತನಾಡುವ ಪ್ರಾಣಿ, ದೈಹಿಕ ಅಂಗವೈಕಲ್ಯ ಇಲ್ಲವೇ ಅತೀತ ಶಕ್ತಿ, ಮಂತ್ರದಂಡ ಮುಂತಾದವುಗಳೆಲ್ಲ ಕಥೆಯ ಬೆಳವಣಿಗೆಗೆ ಕಾರಣವಾಗುವುದರಿಂದ ಆಶಯಗಳೆಂದು ಗುರುತಿಸಬಹುದು. ಜಗತ್ತಿನ ಎಲ್ಲಾ ಜನಪದ ಕಥೆಗಳಿಗೆ ಮೂಲಭೂತವಾದ ಕೆಲವು ಆಶಯಗಳಿದ್ದು ಇವುಗಳ ಸಂಖ್ಯೆ ಸುಮಾರು ಹತ್ತು ಸಾವಿರ ಇರಬಹುದೆಂದು ವಿದ್ವಾಂಸರು ಅಂದಾಜು ಮಾಡಿದ್ದಾರೆ.

ಸ್ವತಂತ್ರ ಅಸ್ತಿತ್ವವುಳ್ಳ ಯಾವುದೇ ಜನಪದ ಕಥೆಯು ಒಂದು 'ವರ್ಗ' ಎನಿಸಿಕೊಳ್ಳಬಲ್ಲದು. ಅದು ಬೇರೆ ಕಥೆಯನ್ನು ಅವಲಂಬಿಸಿರದೆ ತನಗೆ ತಾನೇ ಸ್ವತಂತ್ರವಾದುದಾಗಿರಬೇಕು; ಅರ್ಥಪೂರ್ಣವಾಗಿರಬೇಕು. ಕೆಲವು ವರ್ಗಗಳು ಹತ್ತಾರು ಆಶಯಗಳನ್ನು ಒಳಗೊಂಡು ಸುದೀರ್ಘವಾಗಿರುತ್ತವೆ. ಮತ್ತೆ ಕೆಲವು ವರ್ಗಗಳು ಒಂದೇ ಆಶಯವನ್ನು ಒಳಗೊಂಡ ಚಿಕ್ಕ ಕಥೆಯಾಗಿರುತ್ತವೆ. ಕಥೆಗಳ ತೌಲನಿಕ ಅಭ್ಯಾಸದಿಂದ ಇಂತಹ ವರ್ಗಗಳನ್ನು ಗುರುತಿಸಬಹುದು. ಆಶಯ ಮತ್ತು ವರ್ಗಗಳಿಗೆ ಕೆಲವು ಸಾಮ್ಯ ಮತ್ತು ವ್ಯತ್ಯಾಸಗಳಿವೆ. ಆಶಯ ಅಂತರ ರಾಷ್ಟ್ರೀಯ ವ್ಯಾಪ್ತಿಯನ್ನುಳ್ಳದ್ದಾದರೆ, ವರ್ಗ ಆಯಾ ಭೌಗೋಳಿಕ ಎಲ್ಲೆಗೆ ಸೀಮಿತವಾದದ್ದು, ಜಗತ್ತಿನ ಎಲ್ಲಾ ಜನಪದ ಕಥೆಗಳಲ್ಲಿ ಕಂಡು ಬರುವ ಆಶಯ ಮತ್ತು ವರ್ಗಗಳನ್ನು ಪಾಶ್ಚಾತ್ಯ ಜನಪದ ವಿದ್ವಾಂಸರಾದ ಆಂಟಿ ಆರ್ನೆ ಮತ್ತು ಸ್ಮಿತ್ ಥಾಂಸನ್ ಎಂಬುವರು ಪಟ್ಟಿ ಮಾಡಿರುತ್ತಾರೆ.

ಜನಪದ ಕಥೆಯ ಹುಟ್ಟು, ಬೆಳವಣಿಗೆ, ಪ್ರಸಾರವನ್ನು ಕುರಿತಂತೆ ಅನೇಕ ವಿದ್ವಾಂಸರು ಶ್ರಮವಹಿಸಿ ದುಡಿದಿದ್ದಾರೆ. ಜರ್ಮನಿಯ ಗ್ರಿಂ ಸಹೋದರರು ಮೊತ್ತಮೊದಲ ಬಾರಿಗೆ ಜನಪದ ಕಥೆಯ ಉಗಮ ಮತ್ತು ಪ್ರಸಾರದ ಬಗ್ಗೆ ಚಿಂತನೆ ನಡೆಸಿದ್ದಾರೆ. ವಿದ್ವಾಂಸರು ಸಂಶೋಧನೆಯ ನೂತನ ಬಾಗಿಲುಗಳನ್ನು ತೆರೆದಿದ್ದಾರೆ. ಕನ್ನಡದಲ್ಲಿಯೂ ವಿದ್ವಾಂಸರು ಹಲವಾರು ಸಂಕಲನಗಳನ್ನು ಪ್ರಕಟಿಸಿದ್ದಾರೆ.

ಜನಪದ ಕಥೆ ಎನ್ನುವುದು ಕಲಾತ್ಮಕವಾದ ಸೃಷ್ಟಿಯಾಗಿದ್ದು ಜನತೆಯ ಸಂಸ್ಕೃತಿ, ಇತಿಹಾಸಗಳ ಬಹು ಮುಖ್ಯವಾದ ಭಾಗವಾಗಿದೆ. ಅದ್ಭುತವಾದ ರಂಜಕತೆಯೇ ಅದರ ವೈಶಿಷ್ಟ್ಯ. ಸಮುದಾಯದ ಆಚಾರವಿಚಾರಗಳು, ನಂಬಿಕೆ ನಡಾವಳಿಗಳು, ವಿವೇಕ, ರಸಿಕತೆ, ಬುದ್ಧಿವಂತಿಕೆಯ ಪ್ರತೀಕಗಳಾಗಿ ಕಥೆಗಳು ಕಾಣಿಸಿಕೊಳ್ಳುತ್ತವೆ. ಗ್ರಾಮೀಣ ಸೊಗಡು, ನಾಟಕೀಯತೆಗಳಿಂದ ಕೂಡಿದ್ದು ಜನಪದರ ಕಲ್ಪನೆಗೆ ಕಲಾತ್ಮಕ ಅಭಿವ್ಯಕ್ತಿಯನ್ನು ನೀಡುವಲ್ಲಿ ನೆರವಾಗಿದೆ. ಸಾಹಸ ಕಾರ್ಯಗಳನ್ನು ಪ್ರಚೋದಿಸಿ, ಜ್ಞಾನ ಸಾಧನೆಗೆ ಸಂಕೇತಗಳಾಗಿ ನಿತ್ಯದ ದುಡಿಮೆಯಿಂದಾಗುವ ಬೇಸರದ ಏಕತಾನತೆಯನ್ನು ಹೋಗಲಾಡಿಸಿ, ಮಾನಸಿಕ ನೆಮ್ಮದಿ, ಸುಖ, ವಿಶ್ರಾಂತಿಗಳನ್ನು ತಂದುಕೊಡುತ್ತವೆ.

ಆಧುನಿಕ ವೈಜ್ಞಾನಿಕ ಯುಗದಲ್ಲಿಯೂ ಸಹ ಜನಪದಕತೆಗಳ ಮೇಲಿನ ಪ್ರೀತಿ ವ್ಯಾಮೋಹಗಳು ಕಡಿಮೆಯಾಗಿಲ್ಲ. ಸಮೂಹಮಾಧ್ಯಮಗಳು, ಟಿ.ವಿ. ಸಂಪರ್ಕ ಜಾಲಗಳು ಜನಪದ ಕಥೆಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ವಿದ್ಯಾರ್ಥಿಗಳಿಗೆ, ಸಮುದಾಯಕ್ಕೆ ಶಿಕ್ಷಣವನ್ನು ನೀಡುತ್ತಿವೆ. ಅನೇಕ ದೇಶಗಳಲ್ಲಿ ಈಗಲೂ ಕಥೆ ಹೇಳುವವರು ಜನಾದರಣೆಗೆ ಪಾತ್ರರಾಗಿದ್ದಾರೆ. ಹೀಗೆ ಕಥೆ ಜನಸಾಮಾನ್ಯರಿಗೆ ಮನರಂಜನೆ ನೀಡಬಲ್ಲ ಕಲಾತ್ಮಕ ಸಾಧನವಾಗಿ, ಅಕ್ಷರಸ್ಥರು ಅನಕ್ಷರಸ್ಥರಿಬ್ಬರಿಗೂ ಅರಿವು ಆನಂದಗಳನ್ನುಂಟು ಮಾಡುವ ಮಾಧ್ಯಮವಾಗಿದೆ. ಮಕ್ಕಳಿಗೆ ಮಂತ್ರ ಶಕ್ತಿಯಾಗಿ ಕುತೂಹಲವನ್ನು ಕೆರಳಿಸಿ ಜ್ಞಾನಕೋಶವನ್ನು ತುಂಬುವ ಸಾಧನವಾಗಿದೆ.

✪ ✪ ✪

ಕನ್ನಡ ವಿ … ದವಿ ಮಟ್ಟದವರೆಗೆ ಉತ್ತಮ
ಹಾಗೂ … ವಾಗಿ 'ಪಠ್ಯಪುಸ್ತಕ ರಚನಾ
ವಿಭಾಗ'… ರಿಗಾಗಿ ಪಠ್ಯಪುಸ್ತಕ ರಚನೆ
ಮಾಡಲ … ಇಲಾಖೆ. ನವಸಾಕ್ಷರರಿಗಾಗಿ
ಪುಸ್ತಕ … ದ್ಯಾಲಯಕ್ಕೆ ವಹಿಸಿಕೊಟ್ಟರು.
ವಿಶ್ವವಿದ … ಾಡಿನ ಪ್ರಖ್ಯಾತ ಲೇಖಕರನ್ನು,
ಭಾಷಾತ … ಿಸಿ, ಅವರೆಲ್ಲರ ಅಭಿಪ್ರಾಯ,
ಸಲಹೆ, … , ಭಾಷೆ, ಮುದ್ರಣ ವಿನ್ಯಾಸ,
ಚಿತ್ರಗಳ … ಯು ಅನೇಕ ಸಲ ಚರ್ಚಿಸಿ
ಯೋಜ…

ನವಸಾಕ್ಷ … ಈಗಾಗಲೇ ಪ್ರಕಟವಾಗಿರುವ
ಪುಸ್ತಕಗ … ಗಳನ್ನೆಲ್ಲ ಭಾಷಾತಜ್ಞರಿಂದ
ಪರಿಶೀಲ … ನ್ನು ನೇಮಿಸಿಕೊಂಡು ಅವರಿಗೆ
ಕಮ್ಮಟಗಳನ್ನು ನಡೆಸಿ, ಪ್ರಶ್ನಾವಳಿ ತಯಾರಿಸಿಕೊಟ್ಟು, ಅವರನ್ನು ರಾಜ್ಯದಾದ್ಯಂತ ಆಯ್ದ ಜಿಲ್ಲೆ, ತಾಲೂಕುಗಳಿಗೆ ಕಳುಹಿಸಿ ಈ ಆಂದೋಲನದಲ್ಲಿ ಕಲಿತವರಿಂದ ಮತ್ತು ಕಲಿಯುತ್ತಿರುವವರಿಂದ ಅದರ ಗುಣದೋಷಗಳ ಬಗ್ಗೆ ಅಭಿಪ್ರಾಯ ಸಲಹೆಗಳನ್ನು ಸಂಗ್ರಹಿಸಿ, ಅನಂತರ ಅವುಗಳನ್ನೆಲ್ಲ ವಿಶ್ವವಿದ್ಯಾಲಯದ ಗಣಕಯಂತ್ರದಲ್ಲಿ ವಿಶ್ಲೇಷಿಸಲಾಯಿತು; ಮತ್ತೆ ಮತ್ತೆ ಕ್ಷೇತ್ರಗಳಿಗೆ ಹೋಗಿ, ಕ್ಷೇತ್ರ ಸಹಾಯಕರು ನೀಡಿದ್ದ ಮಾಹಿತಿಗಳನ್ನೆಲ್ಲ ಮರು ಪರಿಶೀಲನೆ ಮಾಡಿ, ನಂತರ ನವಸಾಕ್ಷರರ ಅಪೇಕ್ಷೆಗೆ ಅನುಗುಣವಾಗಿ ವಿಷಯದ ಆದ್ಯತೆಗಳನ್ನು ನಿರ್ಧರಿಸಿಕೊಂಡು ಪುಸ್ತಕ ರಚನೆಗೆ ತೊಡಗಲಾಯಿತು; ಪ್ರಖ್ಯಾತ ಲೇಖಕರು ನಮ್ಮ ವಿಶ್ವವಿದ್ಯಾಲಯದ ಪ್ರಾಧ್ಯಾಪಕರ ಜೊತೆ ಚರ್ಚಿಸಿ ತಮ್ಮ ಹಸ್ತಪ್ರತಿಗಳಿಗೆ ಅಂತಿಮ ರೂಪ ಕೊಟ್ಟರು. ಕಲಾವಿದರು ವಿಷಯಗಳಿಗೊಪ್ಪುವ ಚಿತ್ರಗಳನ್ನು ಬರೆದುಕೊಟ್ಟರು. ಹೀಗೆ ಸಿದ್ಧಗೊಂಡ ಹಸ್ತಪ್ರತಿಗಳನ್ನು ನವಸಾಕ್ಷರರ ಬಳಿ ಕೊಂಡೊಯ್ದು ಅವರ ಮುಂದೆ ಪಠಿಸಿ ನಂತರ ಅವರ ಅಭಿಪ್ರಾಯ, ಪ್ರತಿಕ್ರಿಯೆಗಳನ್ನು ಅಳವಡಿಸಿ ಹಸ್ತಪ್ರತಿಯನ್ನು ಅಂತಿಮಗೊಳಿಸಲಾಯಿತು.

ನಮ್ಮ ಬಹುಸಂಖ್ಯಾತ ಸಮುದಾಯ ಅನಕ್ಷರಸ್ಥರೇ ಹೊರತು ಅವಿದ್ಯಾವಂತರಲ್ಲ. ನೃಪತುಂಗ ಹೇಳುವಂತೆ ಅವರು "ಚದುರರ್ ನಿಜದಿಂ ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್". ಅನುಭವದಲ್ಲಿ, ವಿವೇಕದಲ್ಲಿ, ವ್ಯವಹಾರದಲ್ಲಿ, ತಿಳುವಳಿಕೆಯಲ್ಲಿ ಆ ಜನ ಚದುರರು. ಹೀಗೆಂದು ಅವರನ್ನು ಅಕ್ಷರದಲಿತರನ್ನಾಗಿಯೂ ಉಳಿಸುವಂತಿಲ್ಲ. ಅವರಲ್ಲಿ ಅಕ್ಷರ ಕಲಿಯುವ ಸಾಮರ್ಥ್ಯವಿದೆ. ಕಲಿಸುವ ಹೊಣೆ ಸರ್ಕಾರಗಳ, ವಿಶ್ವವಿದ್ಯಾಲಯಗಳ ಮೇಲಿದೆ. ಈ ನಿಟ್ಟಿನಲ್ಲಿ ದೇಶದಾದ್ಯಂತ ಸಾಕ್ಷರತಾ ಆಂದೋಲನ ನಡೆಯುತ್ತಿದೆ. ಆದರೆ ಈ ಅಕ್ಷರ ಸಂಸ್ಕೃತಿಯ ಆಂದೋಲನದಲ್ಲಿ ಕಲಿತವರಿಗೆ ಮತ್ತು ಕಲಿಯುವವರಿಗೆ ಉತ್ತಮ ಗುಣಮಟ್ಟದ ಪುಸ್ತಕಗಳ ಅವಶ್ಯಕತೆ ಇದೆ. ಕಲಿತವರು ಮರೆಯದಂತೆ, ಕಲಿಕೆಯನ್ನು ಮುಂದುವರಿಸುವಂತೆ ನೋಡಿ ಕೊಳ್ಳುವುದು ಎಲ್ಲರ ಕರ್ತವ್ಯ.

ಕನ್ನಡ ವಿಶ್ವವಿದ್ಯಾಲಯವು ನಾಡಿನ ಹಲವು ವಿದ್ವಾಂಸರೊಂದಿಗೆ ಸೇರಿ ನಡೆಸಿದ ಒಂದು ಸಾಮೂಹಿಕ ಪ್ರಯತ್ನದ ಫಲವಾಗಿ ಈ ಪುಸ್ತಕ ರೂಪತಾಳಿದೆ. ನವಸಾಕ್ಷರರು ಈ ಪುಸ್ತಕವನ್ನು ಪ್ರೀತಿಯಿಂದ ಸ್ವೀಕರಿಸುತ್ತಾರೆಂದು ನಂಬಿದ್ದೇವೆ. ಈ ಯೋಜನೆಯ ಯಶಸ್ಸಿಗೆ ಕಾರಣರಾಗಿರುವ ಉನ್ನತ ಸಲಹಾ ಸಮಿತಿ ಹಾಗೂ ಸಂಪಾದಕ ಸಮಿತಿಯ ಸದಸ್ಯರಿಗೆ, ಲೇಖಕರಿಗೆ, ಕಲಾವಿದರಿಗೆ ಹಾಗೂ ಈ ಯೋಜನೆಯಲ್ಲಿ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ನಮ್ಮೊಡನೆ ಪಾಲ್ಗೊಂಡವರೆಲ್ಲರಿಗೂ ನಮ್ಮ ಹೃತ್ಪೂರ್ವಕವಾದ ವಂದನೆಗಳು. ನಮ್ಮ ವಿಶ್ವವಿದ್ಯಾಲಯದ ಮೇಲೆ ವಿಶ್ವಾಸವಿಟ್ಟು ಇಂತಹ ಒಂದು ಗುರುತರವಾದ ಯೋಜನೆಯನ್ನು ವಹಿಸಿಕೊಟ್ಟ ಲೋಕಶಿಕ್ಷಣ ಇಲಾಖೆಯ ನಿರ್ದೇಶಕರಾದ ಶ್ರೀ ಲೂಕೋಸ್ ವಲ್ಲತ್ತರೈ ಅವರಿಗೆ ನನ್ನ ಕೃತಜ್ಞತೆಗಳು. ಓದುಗರು ಈ ಪುಸ್ತಕದ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ತಿಳಿಸಿದರೆ ನಮ್ಮ ಪಠ್ಯಪುಸ್ತಕ ರಚನೆಗೆ ಉಪಯೋಗವಾಗುತ್ತದೆ.

ಚಂದ್ರಶೇಖರ ಕಂಬಾರ
ಕುಲಪತಿಗಳು